ಸುದ್ದಿ ಹಾಗೂ ಜಾಹೀರಾತಿಗೆ ಸಂಪರ್ಕಿಸಿ
9980498553
9606979449

RNI: KNKAN/ 25/A2724

# ಉತ್ತರ ಕರ್ನಾಟಕ ಸುದ್ದಿಗಳು

ಕನ್ನಡ ದಿನಪತ್ರಿಕೆ

UTTARA KARNATAKA SUDDIGALU
Kannada Daily Morning

Email
uttarkarnatkasuddigalu@gmail.com

ಸಂಪಾದಕರು: ಅವಿನಾಶ ಎಸ್. ಸಾಲಿಮನಿ







ಪೌಷ್ಟಿಕ ಆಹಾರವೇ ಮನುಷ್ಯನ ಆರೋಗ್ಯಕ್ಕೆ ಮನೆ ಮದ್ದು »2

ನವೆಂಬರ್‌ನಲ್ಲಿ ನಡೆಯುವುದೇ ಹಂಪಿ ಉತ್ಸವ? »2

ಮೈಸೂರು ದಸರಾ ಪರಂಪರೆ, ಇತಿಹಾಸ ಮತ್ತು ಗತವೈಭವ »3


ಸಂಪುಟ(Volume): 1 ಸಂಚಿಕೆ (Issue): 297 ● ಪುಟ (Page): 4 ● ದರ: Rs. 4 ಸೋಮವಾರ 12 ಅಕ್ಟೋಬರ್ 2026 ● 12 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ ● ಬೆಳಗಾವಿ ಉತ್ತರ ಕನ್ನಡ




# ನಾಡಹಬ್ಬ ದಸರೆಗೆ ಗವಿಶ್ರೀಗಳಿಂದ ಚಾಲನೆ

**ಮೈಸೂರು:** ಚಾಮುಂಡಿ ಬೆಟ್ಟದಲ್ಲಿ ಸಿದ್ಧಪಡಿಸಲಾಗಿದ್ದ ವಿಶೇಷ ವೇದಿಕೆಯಲ್ಲಿ ಶುಭ ಧನುರ್ ಲಗ್ನದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಗವಿಶ್ರೀಗಳು 11 ದಿನಗಳ ನಾಡಹಬ್ಬ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದರು. ಉದ್ಘಾಟನೆಯ ನಂತರ ಸರ್ಕಾರದ ವತಿಯಿಂದ ಹಾಗೂ ಮೈಸೂರು ಜಿಲ್ಲಾಡಳಿತದ ವತಿಯಿಂದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗವಿಶ್ರೀಗಳಿಗೆ ಬೃಹತ್ ಹೂವಿನ ಹಾರ ಹಾಕಿ, ರೇಷ್ಮೆ ಶಾಲು ಹೊದಿಸಿ ಸಾಂಪ್ರದಾಯಿಕವಾಗಿ ಸನ್ಮಾನಿಸಲು ಸಿಎಂ ಡಿಕೆ ಶಿವಕುಮಾರ್ ಮುಂದಾದರು.



ಆದರೆ, ಸಿಎಂ ಕೈಯಲ್ಲಿದ್ದ ಹಾರ ಹಾಗೂ ಶಾಲನ್ನು ಹಿಡಿದು ಹತ್ತಿರ ಬರುತ್ತಿದ್ದಂತೆಯೇ ಶ್ರೀಗಳು ಕೈಮುಗಿದು ಹಿಂದಕ್ಕೆ ಸರಿದರು. ತಮಗೆ ಯಾವುದೇ ಹಾರ, ಶಾಲು ಅಥವಾ ಸನ್ಮಾನದ ಅಗತ್ಯವಿಲ್ಲವೆಂದು ವಿನಮ್ರವಾಗಿ ತಿಳಿಸಿದ ಅವರು, ಆ ಗೌರವವೆಲ್ಲವೂ ನಾಡದೇವತೆ ಚಾಮುಂಡೇಶ್ವರಿಗೆ ಸಲ್ಲಬೇಕೆಂದು ಸೂಚ್ಯವಾಗಿ ತಿಳಿಸಿ ಸನ್ಮಾನವನ್ನು ನಿರಾಕರಿಸಿದರು.

**ಶ್ರೀಗಳ ಸಹಜ ವೈರಾಗ್ಯ ಮತ್ತು ಸರಳತೆ:** ಕೊಪ್ಪಳದ ಗವಿಮಠದ ಪೀಠಾಧಿಪತಿಗಳಾದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರು ಎಂದಿಗೂ ಪ್ರಚಾರ, ಪ್ರಶಸ್ತಿ, ಹಾರ–ತುರಾಯಿ ಹಾಗೂ ಸನ್ಮಾನಗಳಿಂದ ದೂರವಿರುವವರು. ಲಕ್ಷಾಂತರ ಜನರು ಸೇರುವ ಕೊಪ್ಪಳದ ಐತಿಹಾಸಿಕ ಗವಿಮಠದ ಜಾತ್ರಾ ಮಹೋತ್ಸವದಲ್ಲೂ ಕೂಡ ಶ್ರೀಗಳು ತಮಗೆ ಯಾವುದೇ ವೈಯಕ್ತಿಕ ಸನ್ಮಾನವಾಗಲಿ, ಹಾರ–ಶಾಲುಗಳಾಗಲಿ ಹಾಕದಂತೆ ಭಕ್ತರಿಗೆ ಕಟ್ಟುನಿಟ್ಟಿನ ಮನವಿ ಮಾಡುತ್ತಾ ಬಂದಿದ್ದಾರೆ. ವೈಭವದ ಸತ್ಕಾರಗಳಿಗಿಂತ ಜನಸೇವೆ, ಅನ್ನದಾಸೋಹ ಹಾಗೂ ಜ್ಞಾನದಾಸೋಹಕ್ಕೆ ಅವರು ಸದಾ ಆದ್ಯತೆ ನೀಡುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ ರಾಜಕಾರಣಿಗಳು, ಮುಖಂಡರು ಸನ್ಮಾನ ಮತ್ತು ಫೋಟೋಗಳಿಗೆ ಮುಗಿಬೀಳುವ ದೃಶ್ಯಗಳು ಸಾಮಾನ್ಯವಾಗುತ್ತಿರುವಾಗ, ರಾಜ್ಯದ ಅತ್ಯುನ್ನತ ಹಾಗೂ ಜಗತ್ಪ್ರಸಿದ್ಧ ವೇದಿಕೆಯಲ್ಲೂ ಸನ್ಮಾನದಿಂದ ದೂರ ಸರಿದ ಗವಿಶ್ರೀಗಳ ನಿಸ್ಪೃಹ ನಡೆ ನೆರೆದಿದ್ದ ಗಣ್ಯರು ಹಾಗೂ ಸಹಸ್ರಾರು ಭಕ್ತ ಸಮೂಹವನ್ನು ಮೂಕವಿಸ್ಮಿತರನ್ನಾಗಿಸಿತು.






# ರೇಣುಕಾಸ್ವಾಮಿ ಕೊಲೆ ಕೇಸ್, ತನಿಖಾ ತಂಡದ ವಿರುದ್ಧ ಪೊಲೀಸ್ ಇಲಾಖಾ ವಿಚಾರಣೆಗೆ ಆದೇಶ

**ಬೆಂಗಳೂರು:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದೊಡ್ಡ ತಿರುವು ಸಿಕ್ಕಿದೆ. ತನಿಖಾ ಲೋಪ ಆರೋಪ ಕೇಳಿಬಂದಿದ್ದು, ಇದಕ್ಕೆ ಸಂಬಂಧ ತನಿಖಾ ತಂಡದ ವಿರುದ್ಧ ಪೊಲೀಸ್ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ.

ಈ ಕುರಿತು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಡಿಜಿ ಐಜಿಪಿಗೆ ದೂರು ನೀಡಿದ್ದರು. "ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪಿಎಸ್‌ಐ ವಿನಯ್ ಪಾತ್ರವಿದ್ದು, ನಿಜಾಂಶ ಮುಚ್ಚಿಡಲಾಗಿದೆ. ರೇಣುಕಾಸ್ವಾಮಿ ಅವರನ್ನು ಕೊಲೆ ಮಾಡಿದ ಬಳಿಕ ಮೃತದೇಹವನ್ನು ಬಿಸಾಡಲು ಪಿಎಸ್‌ಐ ಉಪಾಯ ನೀಡಿದ್ದರು ಎಂಬ ಮಾಹಿತಿಯಿದ್ದರೂ, ಅವರನ್ನು ಆರೋಪಿಯನ್ನಾಗಿ ಪರಿಗಣಿಸಿಲ್ಲ. ಅಲ್ಲದೇ ತನಿಖಾಧಿಕಾರಿ ಎಸಿಪಿ ಚಂದನ್‌ಕುಮಾರ್ ಹಲವು ಗಂಭೀರ ತನಿಖಾ ಲೋಪಗಳನ್ನು ಎಸಗಿದ್ದಾರೆ. ಈ ಹಿನ್ನೆಲೆಯಲ್ಲಿಇವರನ್ನೂ ಇಲಾಖಾ ವಿಚಾರಣೆಗೆ ಒಳಪಡಿಸಬೇಕು," ಎಂದು ಆಗ್ರಹಿಸಿದ್ದರು.

ಈ ದೂರಿನ ಅನ್ವಯ ಸತ್ಯಾಂಶ ಪರಿಶೀಲಿಸಿ ವರದಿ ನೀಡುವಂತೆ ನಗರ ಪೊಲೀಸ್ ಆಯುಕ್ತರು, ಜಂಟಿ ಪೊಲೀಸ್ ಆಯುಕ್ತ ಸಿ.ವಂಶಿಕೃಷ್ಣ ಅವರಿಗೆ ಸೂಚಿಸಿದ್ದಾರೆ ಎಂದು ದೂರುದಾರ ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ.

**ಪ್ರಕರಣವು ಹೊಸ ತಿರುವು ಪಡೆಯುವ ಸಾಧ್ಯತೆ:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿರುವ ಪ್ರದೂಷ್ ರಾವ್, ಪಿಎಸ್‌ಐ ವಿನಯ್‌ಗೆ ರೇಣುಕಾಸ್ವಾಮಿ ಕೊಲೆಯಾದ ವಿಚಾರ ಗೊತ್ತಿತ್ತು ಎಂದು ಹೇಳಿಕೆ ನೀಡಿದ್ದಾರೆ. ಈ ಬೆನ್ನಲ್ಲೇ ಆಂತರಿಕ ತನಿಖೆಗೆ ಆದೇಶಿಸಿದ್ದು, ಪ್ರಕರಣವು ಹೊಸ ತಿರುವು ಪಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

**ಮಾಫಿ ಸಾಕ್ಷಿ ಹೇಳಿಕೆ ದಾಖಲು ಪ್ರಕ್ರಿಯೆ ಮುಕ್ತಾಯ:** ಪ್ರಕರಣದ ಮಾಫಿ ಸಾಕ್ಷಿ ಪ್ರದೋಷ್ ಎಸ್. ರಾವ್ ಅವರ ಮಾಫಿ ಸಾಕ್ಷಿ ಹೇಳಿಕೆ ದಾಖಲು ಪ್ರಕ್ರಿಯೆ ಮುಕ್ತಾಯಗೊಂಡಿದೆ. 59ನೇ ಸೆಷನ್ಸ್ ನ್ಯಾಯಾಲಯದ ಮುಂದೆ ಹಾಜರಾಗಿದ್ದ ಪ್ರದೋಷ್, ಈ ಹಿಂದೆ ಎರಡು ದಿನ ದಾಖಲಿಸಿದ್ದ ಹೇಳಿಕೆಯ ಮುಂದುವರಿದ ಭಾಗದ ಹೇಳಿಕೆ ದಾಖಲಿಸಿದರು. ಈ ಪ್ರಕ್ರಿಯೆ ಮುಗಿದ ಬಳಿಕ ನ್ಯಾಯಾಲಯವು ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿತು. ಮತ್ತೊಂದೆಡೆ ಮಾಫಿ ಸಾಕ್ಷಿ ಹೇಳಿಕೆಯನ್ನು ಕ್ರಾಸ್ ಎಕ್ಸಾಮಿನ್ ಮಾಡಲು ಅವಕಾಶ ನೀಡುವಂತೆ ಕೋರಿ ದರ್ಶನ್ ಪರ ವಕೀಲರು ಸಲ್ಲಿಸಿರುವ ಅರ್ಜಿ ವಿಚಾರಣೆಯ ಆದೇಶವನ್ನು ನ್ಯಾಯಾಲಯ ಪ್ರಕಟಿಸಲಿದೆ.



## ನಟರಿಗೆ ಸಮನ್ಸ್ ಜಾರಿ

ಪ್ರಕರಣದ ಸಾಕ್ಷಿಗಳಾದ ನಟರಾದ ಚಿಕ್ಕಣ್ಣ, ಯಶಸ್ ಸೂರ್ಯಗೆ ವಿಚಾರಣಾ ಸಮನ್ಸ್ ಜಾರಿಗೊಳಿಸಿ 59ನೇ ಸೆಷನ್ಸ್ ನ್ಯಾಯಾಲಯ ಗುರುವಾರ ಆದೇಶಿಸಿದೆ. ಅ.13ರಂದು ವಿಚಾರಣೆಗೆ ಆಗಮಿಸುವಂತೆ ನಟರಿಗೆ ನ್ಯಾಯಾಲಯ ಸೂಚಿಸಿದ್ದು, ಅದೇ ದಿನ ಸಾಕ್ಷ್ಯ ಹೇಳಿಕೆ ಪಡೆಯಲಾಗುತ್ತದೆ. 2024ರ ಜೂನ್ 8ರಂದು ಮಧ್ಯಾಹ್ನ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ನಟ ದರ್ಶನ್ ಜತೆ ಚಿಕ್ಕಣ್ಣ ಹಾಗೂ ಯಶಸ್ ಸೂರ್ಯ ಇದ್ದರು. ಅದೇ ದಿನ ರೇಣುಕಾಸ್ವಾಮಿ ಕೊಲೆ ನಡೆದಿದ್ದು, ದರ್ಶನ್ ಕೃತ್ಯದ ಎರಡನೇ ಆರೋಪಿಯಾಗಿದ್ದಾರೆ. ಈ ನಿಟ್ಟಿನಲ್ಲಿಚಿಕ್ಕಣ್ಣ ಹಾಗೂ ಯಶಸ್ ಸೂರ್ಯರನ್ನು ಪೊಲೀಸರು ಸಾಕ್ಷಿಗಳನ್ನಾಗಿ ಪರಿಗಣಿಸಿದ್ದಾರೆ.

# ಮಣಿಪುರದಲ್ಲಿ ಭುಗಿಲೆದ್ದ ಹಿಂಸಾಚಾರ 13 ಸಾವು

**ಇಂಫಾಲ್:** ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಕಾಮ್ಜೋಂಗ್ ಮತ್ತು ಉಖ್ರುಲ್ ಜಿಲ್ಲೆಗಳಲ್ಲಿ ಅಕ್ಟೋಬರ್ 10ರ ಶನಿವಾರದಂದು ಶಂಕಿತ ಸಶಸ್ತ್ರಧಾರಿಗಳ ಗುಂಪೊಂದು ನಡೆಸಿರುವ ಗುಂಡಿನ ದಾಳಿಯಲ್ಲಿ ಶನಿವಾರ ಕನಿಷ್ಠ ಐವರು ಸಾವನ್ನಪ್ಪಿದ್ದಾರೆ. ಈ ವೇಳೆ ಚಸ್ಸಾಡ್ ಪ್ರದೇಶದಲ್ಲಿ 10 ಮನೆಗಳು ಹಾಗೂ 20 ಅಂಗಡಿಗಳನ್ನು ಸುಟ್ಟುಹಾಕಲಾಗಿದೆ. ನಾಗಾ ಮತ್ತು ಕುಕಿ– ಝೋ ಸಮುದಾಯಗಳ ನಡುವೆ ಇತ್ತೀಚಿನ ದಿನಗಳಲ್ಲಿ ಭುಗಿಲೆದ್ದಿರುವ ಹಿಂಸಾಚಾರದ ಹಿನ್ನೆಲೆಯಲ್ಲಿ, 'ಕಮಿಟಿ ಆನ್ ಟ್ರೈಬಲ್ ಯೂನಿಟಿ' ಸಂಘಟನೆಯು ಶನಿವಾರ ಸಂಜೆ 6 ಗಂಟೆಯಿಂದ ಕಾಂಗ್‌ಪೋಕ್ಪಿ ಜಿಲ್ಲೆಯಾದ್ಯಂತ 24 ಗಂಟೆಗಳ ಕಾಲ ಬಂದ್‌ಗೆ ಕರೆ ನೀಡಿದೆ. ಜಿಲ್ಲಾ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ತನಿಖೆ ಕೈಗೊಂಡಿದ್ದಾರೆ.

ಕಾಮ್ಜೋಂಗ್ ಜಿಲ್ಲೆಯ ಚಸ್ಸಾಡ್‌ನಲ್ಲಿ ಶನಿವಾರ ಬೆಳಿಗ್ಗೆ ಶಂಕಿತ ಸಶಸ್ತ್ರಧಾರಿಗಳ ಗುಂಪು ನಡೆಸಿದ ಗುಂಡಿನ ದಾಳಿಯಲ್ಲಿ 23 ವರ್ಷದ ಮೈಕೆಲ್ ಗಮ್ಮಿನ್ ಲೇನ್ ಹಾವೊಕಿಪ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಂದು ಘಟನೆಯಲ್ಲಿ, ಉಖ್ರುಲ್



ಜಿಲ್ಲೆಯ ಟಿಎಂ ಕಾಸೋಮ್ ಸಮೀಪದ ಯಾವೋಲೆನ್ ಬಳಿ ನಡೆದ ಹೊಂಚುದಾಳಿಯಲ್ಲಿ 40 ವರ್ಷದ ಸಂದೀಪ್ ರೈ ಎಂಬವರ ಮೇಲೆ ಶಸ್ತ್ರಸಜ್ಜಿತ ವ್ಯಕ್ತಿಗಳು ಗುಂಡು ಹಾರಿಸಿದ್ದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಈ ಸಾವುಗಳಿಗೂ ಮುನ್ನ, ಶುಕ್ರವಾರ ರಾತ್ರಿ 9:40ರ ಸುಮಾರಿಗೆ ಚಸ್ಸಾಡ್‌ನಲ್ಲಿ ಐದು ಮಕ್ಕಳ ತಾಯಿಯಾದ ಕುಕಿ ಮಹಿಳೆ ಡೊಮ್ಖೋ ತೌತಾಂಗ್ ಅವರು ಗುಂಡೇಟಿನಿಂದ ಸಾವನ್ನಪ್ಪಿದ್ದರು. ಇದರೊಂದಿಗೆ, ಶನಿವಾರ ಬೆಳಿಗ್ಗೆ 9:30ರ ಸುಮಾರಿಗೆ ಕಾಮ್ಜೋಂಗ್ ಜಿಲ್ಲೆಯ ಮಣಿಪುರ–ಮ್ಯಾನ್ಮಾರ್ ಗಡಿಯಲ್ಲಿರುವ ನಿಂಗ್ಚೌ ಗ್ರಾಮದಲ್ಲಿ ಇಬ್ಬರು ನಾಗಾ ಗ್ರಾಮಸ್ಥರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಮೃತರನ್ನು 35 ವರ್ಷದ ಗಚಾನ್ಸೋ ನಿಂಗ್‌ಶೆನ್ ಮತ್ತು 48 ವರ್ಷದ ಲೈಶಿಶನ್ ಲೈಶಾಡಂಗ್ ಎಂದು ಗುರುತಿಸಲಾಗಿದೆ. ದಾಳಿಕೋರರ ವಿವರಗಳು ತಕ್ಷಣಕ್ಕೆ ಲಭ್ಯವಾಗಿಲ್ಲ. ಈ ಎಲ್ಲಾ ಘಟನೆಗಳೊಂದಿಗೆ ಪ್ರಸ್ತುತ ಹಿಂಸಾಚಾರದಲ್ಲಿ ಸಾವನ್ನಪ್ಪಿದವರ ಸಂಖ್ಯೆ ಐಕಕಕ್ಕೆ ಏರಿದೆ (ಕಾಮ್ಜೋಂಗ್ ಜಿಲ್ಲೆಯಲ್ಲಿ 4 ಹಾಗೂ ಉಖ್ರುಲ್ ಜಿಲ್ಲೆಯಲ್ಲಿ 1 ಸಾವು).

**ಬೆಂಕಿಗೆ ಆಹುತಿಯಾದ ಮನೆ ಹಾಗೂ ಅಂಗಡಿ**

ಶನಿವಾರ ಚಸ್ಸಾಡ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕನಿಷ್ಠ 10 ಮನೆಗಳು ಹಾಗೂ 20 ಅಂಗಡಿಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಇದರಿಂದ ಉಂಟಾದ ಹಾನಿಯ ನಿಖರ ಮಾಹಿತಿ ಮತ್ತು ಸ್ಥಳಾಂತರಗೊಂಡವರ ವಿವರಗಳು ಇನ್ನೂ ಸ್ಪಷ್ಟವಾಗಿಲ್ಲ.

**ಮಾಜಿ ಸಿಎಂ ಬೀರೇನ್ ಸಿಂಗ್ ಖಂಡನೆ**

ಮಣಿಪುರದ ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಮಾಜಿ ಮುಖ್ಯಮಂತ್ರಿ ಎನ್. ಬೀರೇನ್ ಸಿಂಗ್, ಒಂದೇ ದಿನದಲ್ಲಿ ಏಳು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಕಾಮ್ಜೋಂಗ್‌ನಲ್ಲಿ ಪೊಲೀಸ್ ಠಾಣೆ ಸುಟ್ಟುಹೋಗಿರುವ ಘಟನೆ ಹಾಗೂ ಅಕ್ರಮ ಶಸ್ತ್ರಾಸ್ತ್ರಗಳ ವಶಕ್ಕೆ ಮತ್ತು ಸಶಸ್ತ್ರ ಗುಂಪುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ. ರಾಜ್ಯ ಮತ್ತು ಕೇಂದ್ರ ಭದ್ರತಾ ಪಡೆಗಳು ಯಾವುದೇ ವಿಳಂಬವಿಲ್ಲದೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ನೇಪಾಳದಲ್ಲಿ ಮತ್ತೆ ಪ್ರವಾಹ ಭೀತಿ

**ಕಠ್ಮಂಡು:** ಕೇವಲ ಒಂದು ತಿಂಗಳ ಹಿಂದಷ್ಟೇ ಭೀಕರ ಪ್ರವಾಹಕ್ಕೆ ತುತ್ತಾಗಿದ್ದ ನೇಪಾಳದಲ್ಲಿ ಮತ್ತೆ ಪ್ರವಾಹ ಭೀತಿ ಎದುರಾಗಿದೆ. ಇಂದು (ಅ.11–ಭಾನುವಾರ) ಗೋರ್ಖಾ ಪ್ರದೇಶದಲ್ಲಿ ಸಂಭವಿಸಿದ ಹಠಾತ್ ಪ್ರವಾಹದಲ್ಲಿ, 35ಕ್ಕೂ ಹೆಚ್ಚು ಮನೆಗಳು ಮತ್ತು ಸೇತುವೆಗಳು ಕೊಚ್ಚಿಹೋಗಿವೆ ಹಾಗೂ ಜಲವಿದ್ಯುತ್ ಯೋಜನೆಯೊಂದಕ್ಕೆ ಹಾನಿಯಾಗಿದೆ.

ತ್ರಿಶೂಲಿ ನದಿಯ ಉಪನದಿಯಾದ ಬುಧಿ ಗಂಡಕಿಯಲ್ಲಿ ನೀರಿನ ಮಟ್ಟ ಏರಿಕೆಯಾದ ಪರಿಣಾಮ, ಗೋರ್ಖಾ ಜಿಲ್ಲೆಯ ಚುಮ್ನುಬ್ರಿ ಗ್ರಾಮದಲ್ಲಿ ಈ ಹಠತ್ ಪ್ರವಾಹ ಉಂಟಾಗಿದೆ.



ಆಗಸ್ಟ್ 26ರಂದು ಇದೇ ನದಿಯ ಮತ್ತೊಂದು ಉಪನದಿಯಲ್ಲಿ ಹಿಮನದಿ ಕುಸಿತದಿಂದಾಗಿ ಪ್ರವಾಹ ಉಂಟಾಗಿ, 1,457 ಜನರು ಮೃತಪಟ್ಟು, ಸಾವಿರಾರು ಮಂದಿ ನಾಪತ್ತೆಯಾಗಿದ್ದರು. ಈಗ ಅದರ ಕೆಳಭಾಗದ ಪ್ರದೇಶದಲ್ಲಿ ಪ್ರವಾಹ ಸಂಭವಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾದ ವಿಡಿಯೋಗಳಲ್ಲಿ, ನದಿಯ ನೀರು ಸಂಪೂರ್ಣವಾಗಿ ಕಪ್ಪು ಮತ್ತು ಬೂದು ಬಣ್ಣಕ್ಕೆ ತಿರುಗಿ, ದಪ್ಪನೆಯ ಕೆಸರು ಹಾಗೂ ಅವಶೇಷಗಳೊಂದಿಗೆ ಹರಿಯುತ್ತಿರುವುದು ಕಂಡುಬಂದಿದೆ. ನೀರಿನ ಮಟ್ಟವು 8.43 ಮೀಟರ್‌ಗಳಿಗೆ ಏರಿಕೆಯಾಗಿದೆ. ಇದು 5 ಮೀಟರ್‌ಗಳ ಅಪಾಯದ ಮಟ್ಟಕ್ಕಿಂತಲೂ ಬಹಳ ಹೆಚ್ಚಾಗಿದೆ ಎಂದು ನೇಪಾಳದ ರಾಷ್ಟ್ರೀಯ ವಿಪತ್ತು ಅಪಾಯ ಕಡಿತ ಮತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning


ಚೈತ್ರಾ ವೀರೇಶ್ ಕೊಪ್ಪಳ


ಸಹನಾ ಹಿರೇಮಠ, ಗಂಗಾವತಿ


ಶೈಲಾ ಗೆಳತಿಯರು, ಶಿವಾನಂದ ನಗರ ರೋಣ


ಪ್ರಿಯಾಂಕಾ ಹುಬ್ಬಳ್ಳಿ


ಭಾರತಿ ಗದಗ


ಲತಾ ಕೋರಿ ಹಾಗೂ ಗೆಳತಿಯರು ಹಿರೇಜಂತಕಲ್, ಗಂಗಾವತಿ


ಜಿಲ್ಲಾ ಆಸ್ಪತ್ರೆ ಸಿಬ್ಬಂದಿ, ಬಾಗಲಕೋಟೆ


ವಿಜಯಲಕ್ಷ್ಮಿ ಕರಡಿಮಠ ಗಂಗಾವತಿ


ಪಲ್ಲೇದ ಕುಟುಂಬ ಶ್ರೀನಗರ ರೋಣ


ಸುಮಾ ಹಿರೇಮಠ


ಜಯಶ್ರೀ ಸಂಗಡಿಗರು ರೋಣ


ಆರಾಧ್ಯ ನಿಂಗಪ್ಪ ಮುದಗಲ್ಲ ಶಿಗ್ಲಿ


ಕವಿತಾ ಸಂಗಡಿಗರು ಧಾರವಾಡ


ಕಾವ್ಯಾ, ಶ್ವೇತಾ, ಅರುಂದತಿ ಗೆಳೆತಿಯರು, ಗದಗ

# ಪೌಷ್ಟಿಕ ಆಹಾರವೇ ಮನುಷ್ಯನ ಆರೋಗ್ಯಕ್ಕೆ ಮನೆ ಮದ್ದು

**ರೋಣ:** ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ನಾ ನುಡಿಯಂತೆ ಆಹಾರದ ಬಗ್ಗೆ ಸರಿಯಾದ ಕಲ್ಪನೆ ಗೊತ್ತಿದ್ದಲ್ಲಿ ಹಲವಾರು ಗಳಿಂದ ದೂರವಿರಬಹುದಲ್ಲದೆ ಸದೃಢವಾದ ದೇಹದ ನಿರ್ಮಾಣದಲ್ಲಿ ಪೌಷ್ಟಿಕ ಆಹಾರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಲಲಿತಾ ಅಳವಂಡಿ ಹೇಳಿದರು

ಅವರು ರೋಣ ಸಮೀಪದ ಶಾಂತಿಗೇರಿಯ ಸರಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ ಇವರುಗಳಸಂಯುಕ್ತಆಶ್ರಯದಲ್ಲಿಜರುಗಿದಪೋಷಣ ಮಾಸಚರಣೆಯ ಸಮಾರೋಪ ಸಮಾರಂಭದಲ್ಲಿ ಉದ್ಘಾಟಕರಾಗಿ ಮಾತನಾಡಿ, ಪೋಷಣೆ ಎಂಬುದು ತಾಯಿಯ ಗರ್ಭದಲ್ಲಿ ಆರಂಭವಾಗಿ ಮನುಷ್ಯನ ಅಂತ್ಯದವರೆಗೆ ಬಹು ಪ್ರಮುಖ ಪಾತ್ರ ವಹಿಸುತ್ತದೆ ಆದ್ದರಿಂದ ತಾಯಿ ಗರ್ಭಿಣಿಯಾಗಿರುವಾಗಲೇ ತನ್ನ ಆರೋಗ್ಯದ ಬಗ್ಗೆ ಮತ್ತು ಗರ್ಭದಲ್ಲಿರುವ ಮಗುವಿನ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕೆಂದು ಅವರು ಹೇಳಿದರು

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಕೆ ಎ ಹಾದಿಮನಿ ಮಾತನಾಡಿ, ಸಾರ್ವಜನಿಕರಿಗೆ ಪೌಷ್ಟಿಕ ಆಹಾರದ ಮಹತ್ವದ ಕುರಿತು ತಿಳಿಸಿಕೊಡಬೇಕೆನ್ನುವ ಮಹಾನ್ ಉದ್ದೇಶ ಇಟ್ಟುಕೊಂಡು ಸಪ್ಟೆಂಬರ್ 9 ರಿಂದ ಅಕ್ಟೋಬರ್ 9 ಪೋಷಣ ಮಾಸಾಚರಣೆ ಆಚರಿಸಲಾಗುತ್ತಿದೆ ಹುಟ್ಟಿದ ಕಂದಮ್ಮನಲ್ಲಿ, ಎಳೆಯ ಮಕ್ಕಳಲ್ಲಿ, ಹದಿಹರೆದವರಲ್ಲಿ, ವಯಸ್ಕರಲ್ಲಿ, ಗರ್ಭಿಣಿ ತಾಯಂದಿರಲ್ಲಿ,ಬಾಣಂತಿಯರಲ್ಲಿ,ವಯೋವೃದ್ದರಲ್ಲಿ ಪೋಷಕಾಂಶ ಯುಕ್ತ ಆಹಾರ ಬಹು ಪ್ರಮುಖ ಪಾತ್ರ ವಹಿಸುತ್ತಿದ್ದು ಸಮತೋಲನ ಆಹಾರದ ಬಗ್ಗೆ ಅರಿವು ಮೂಡಿಸಿ ಮನುಷ್ಯನ ಆರೋಗ್ಯವನ್ನು ಕಾಪಾಡವದು




ಬಹು ಮುಖ್ಯವಾಗಿದ್ದು ಆಹಾರದ 7 ಘಟಕಗಳ ಜೊತೆಗೆ ತರಕಾರಿ ಮತ್ತು ಋತುಮಾನಕ್ಕನುಗುಣವಾಗಿ ಹಣ್ಣುಗಳ ಸೇವನೆ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ಅವರು ಹೇಳಿದರು

ಕಾರ್ಯಕ್ರಮದಅಧ್ಯಕ್ಷತೆವಹಿಸಿದ್ದಪ್ರಾಥಮಿಕಆರೋಗ್ಯ ಕೇಂದ್ರ ಶಾಂತಗೇರಿಯ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಬಸವನಗೌಡ ಪವಾಡಿಗೌಡರ ಮಾತನಾಡಿ, ಆರೋಗ್ಯ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಈ ಎರಡು ಇಲಾಖೆಗಳ ಸೇವೆ ಗರ್ಭದಿಂದ ಘೋರಿಯವರೆಗೆ ಎನ್ನುವಂತೆ ಗರ್ಭಾವಸ್ಥೆ ಇಂದ ಹಿಡಿದು ವೃದ್ಧಾಪ್ಯದವರೆಗೆ ಈ ಇಲಾಖೆಗಳು ಸೇವೆ ಸಲ್ಲಿಸುತ್ತವೆ ಎಂದು ಅವರು ಹೇಳಿದರು

ಕಾರ್ಯಕ್ರಮದಲ್ಲಿ ಪೋಷಣಾ ಮಾಸಾಚರಣೆಯ ಅಂಗವಾಗಿ ವರ್ಣ ರಂಜಿತ ಚಿತ್ರಗಳನ್ನು ಬಿಡಿಸಲಾಗಿತ್ತು ಈ ಸಂದರ್ಭದಲ್ಲಿ ಗರ್ಭಿಣಿ ತಾಯಂದಿರಿಗೆ ಸೀಮಂತಕಾರಣ, ಆರು ತಿಂಗಳು ಮೇಲ್ಪಟ್ಟ ಮಕ್ಕಳಿಗೆ ಅನ್ನಪ್ರಾಸನ ಕಾರ್ಯಕ್ರಮ, ಕೇವಲ ಹೆಣ್ಣು ಮಕ್ಕಳನ್ನು ಹೆತ್ತ ತಾಯಂದಿರರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಮುಖ್ಯ ವೇದಿಕಯಲ್ಲಿ ಅಂಗನವಾಡಿಯ ಮೇಲ್ವಿಚಾರಕಿಯರಾದ ಸುವಣಾ9 ಹಾನಾಪೂರ, ರೇಣುಕಾ ಚಂದ್ರಣ್ಣನವರ

ಬೀಬಿಜಾನ್ ಓಲೇಕಾರ ಅಂಗನವಾಡಿ ಕಾರ್ಯಕತೆ-ರ್ಯಯರಾದ ಲಕ್ಷೀಬಾಯಿ ಮಾದರ ಜಯಶ್ರೀ ಬಿಲ್ಲೂರ ಸುವರ್ಣ ಪೂಜಾರ ಸುಜಾತ ಗೌಡರ ಭಾರತಿ ಹಿರೇಮಠ ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು ಸಮುದಾಯ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಹಾಜರಿದ್ದರು.

# ಮಿಣುಕು ದೀಪಗಳು' ಕೃತಿಗೆ ರಾಜ್ಯಮಟ್ಟದ ದತ್ತಿ ಪ್ರಶಸ್ತಿ

## ಗಂಗಾವತಿಯ ಶ್ರೀಮತಿ ಜಯಶ್ರೀ ಹಕ್ಕಂಡಿ ಅವರಿಗೆ ಹಾಸನದಲ್ಲಿ ಗೌರವ

**ಗಂಗಾವತಿ:** ಹಾಸನದಲ್ಲಿ ಇಂದು ನಡೆದ ರಾಜ್ಯಮಟ್ಟದ 11ನೇ ಕವಿ ಕಾವ್ಯ ಸಂಭ್ರಮ ಕಾರ್ಯಕ್ರಮದಲ್ಲಿ ಗಂಗಾವತಿ (ಅಳವಂಡಿ)ಯ ಸಾಹಿತಿ ಹಾಗೂ ಕವಯತ್ರಿ ಶ್ರೀಮತಿ ಜಯಶ್ರೀ ಹಕ್ಕಂಡಿ ಅವರು ರಚಿಸಿರುವ 'ಮಿಣುಕು ದೀಪಗಳು' ಕೃತಿಗೆ 2026ನೇ ಸಾಲಿನ ರಾಜ್ಯಮಟ್ಟದ ದತ್ತಿ ಪ್ರಶಸ್ತಿ ಲಭಿಸಿದೆ. ಚುಟುಕು ಮಾಣಿಕ್ಯ ಪ್ರಕಾಶನ, ಹಾಸನ ಇವರ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಕವಿ ಕಾವ್ಯ ಸಂಭ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಹಿತ್ಯ ಸೇವೆ ಸಲ್ಲಿಸುತ್ತಿರುವ ಸಾಹಿತಿಗಳು, ಕವಿಗಳು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀಮತಿ ಜಯಶ್ರೀ ಹಕ್ಕಂಡಿ ಅವರ 'ಮಿಣುಕು ದೀಪಗಳು' ಕೃತಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿ ರಾಜ್ಯಮಟ್ಟದ ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಪ್ರಶಸ್ತಿಯೊಂದಿಗೆ ಗೌರವಧನವನ್ನೂ ನೀಡಿ ಸನ್ಮಾನಿಸಲಾಯಿತು.

'ಮಿಣುಕು ದೀಪಗಳು' ಕೃತಿಗೆ ದೊರೆತಿರುವ ಈ ಪ್ರಶಸ್ತಿ ಗಂಗಾವತಿ ಹಾಗೂ ಕೊಪ್ಪಳ ಜಿಲ್ಲೆಯ ಸಾಹಿತ್ಯ ವಲಯಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಸ್ಥಳೀಯ ಪ್ರತಿಭೆಯೊಬ್ಬರ ಸಾಹಿತ್ಯ ಕೃತಿಗೆ ರಾಜ್ಯಮಟ್ಟದಲ್ಲಿ ಮನ್ನಣೆ ದೊರೆತಿರುವುದು ಜಿಲ್ಲೆಯ ಸಾಹಿತ್ಯಾಸಕ್ತರಲ್ಲಿ ಸಂತಸ ಮೂಡಿಸಿದೆ.

ಕಾರ್ಯಕ್ರಮದಲ್ಲಿ ಚುಟುಕು ಮಾಣಿಕ್ಯ ಪ್ರಕಾಶನದ ಸಂಚಾಲಕರಾದ ಕೊಟ್ರೇಶ್ ಉಪ್ಪಾರ್, ಪ್ರಕಾಶನದ ಅಧ್ಯಕ್ಷರಾದ ದೀಪ ಉಪ್ಪಾರ್, ಸಮ್ಮೇಳನದ ಅಧ್ಯಕ್ಷರಾದ ಡಾ. ಹಸೀನಾ, ಹಾಸನದ ಹಿರಿಯ ಸಾಹಿತಿಗಳು, ಕವಿಗಳು, ಸಾಹಿತ್ಯಾಸಕ್ತರು ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಕುಡಿಯುವ ನೀರು, ಮೇವಿನ ಕೊರತೆಯಾಗದಂತೆ ಕ್ರಮ ವಹಿಸಬೇಕು: ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ

**ಗದಗ** : ಜಿಲ್ಲೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ಕ್ರಮವಹಿಸಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ವಿವಿಧ ಅಧಿಕಾರಿಗಳ ಸಮನ್ವಯದೊಂದಿಗೆ ಎದುರಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಹಿಂಗಾರು ಹಂಗಾಮಿನಲ್ಲಿ ಗ್ರಾಮೀಣ / ನಗರ ಪ್ರದೇಶದಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಮೇವಿನ ಲಭ್ಯತೆ-ಯ ಕುರಿತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕಾವಾರು ನೀರಿನ ಸಮಸ್ಯೆ ಇರುವ ಗ್ರಾಮಗಳ ಪಟ್ಟಿ ತಯಾರಿಸಿ ಸಲ್ಲಿಸಬೇಕು.ಜಾನುವಾರುಗಳಿಗೆ ಮೇವಿನ ಕೊರತೆ-ಯಾಗದಂತೆ ಕ್ರಮವಹಿಸಬೇಕು.ಜಲಾಶಯಗಳಿಂದ ನೀರು ಬಿಡುವ ಮುನ್ನ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜನ ಮತ್ತು ಜಾನುವಾರುಗಳಿಗೆ ಸಾಕಷ್ಟು ಕುಡಿಯುವ ನೀರು ಹಾಗೂ ಅಗತ್ಯ ಮೇವಿನ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಜಲ ಜೀವನ್ ಮಿಷನ್ (ಎಎಒ) ಯೋಜನೆಯಡಿ ಕೈಗೆತ್ತಿಕೊಳ್ಳಲಾದ ಜೆಜೆಎಮ್ ಕಾಮಗಾರಿಗಳನ್ನು ತ್ವರಿತವಾಗಿ ಹಾಗೂ ಗುಣಮಟ್ಟದಿಂದ ಪೂರ್ಣಗೊಳಿಸಿ ಪ್ರತಿಯೊಂದು ಮನೆಗೆ ನಲ್ಲಿ ನೀರು ತಲುಪಿಸಬೇಕು ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ವಸತಿ ರಹಿತರಿಗೆ ನಿವೇಷನ ನೀಡಲು ಭೂಮಿ ಲಭ್ಯತೆ ಕುರಿತು ತಹಸೀಲ್ದಾರ್ ಹಾಗೂ ಇಒಗಳು ನೀಡಿದ ವರದಿಗಳನ್ನು ಪರಿಶೀಲಿಸಿ, ಸೂಕ್ತ ಭೂ ಸುಧಾರಣೆ ಹಾಗೂ ಲೆವೆಲಿಂಗ್ ಮಾಡಿ ನಿವೇಷನ ಜಾಗ ಒದಗಿಸಲು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳಲ್ಲಿ ಪ್ರಸ್ತುತ ಸಂಗ್ರಹವಾಗಿರುವ ನೀರಿನ ಪ್ರಮಾಣ ಹಾಗೂ ಜಿಲ್ಲೆಯ ಅಂತರ್ಜಲ ಮಟ್ಟದ ವರದಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ನೀರನ್ನು ಸಮರ್ಪಕವಾಗಿ ಬಳಕೆ ಮಾಡಲು ಸೂಚಿಸಿದರು. ಅಲ್ಲದೆ ಕೆರೆಗಳ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ತಪಾಸಣೆ ಮಾಡಲು ನಿರ್ದೇಶಿಸಿದರು. ತೆ-ೂಟಗಾರಿಕೆ ಇಲಾಖೆ ಕಾರ್ಯಕ್ರಮಗಳು ಹಾಗೂ ವಿಬಿಜಿ ರಾಮ್ ಜಿ ಯೋಜನೆಯ ಪ್ರಗತಿ ವಿವರಗಳನ್ನು ಪರಿಶೀಲಿಸಿ, ನಿಗದಿತ ಅವಧಿಯಲ್ಲಿ ಗುರಿ ತಲುಪಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಸೂಚಿಸಿದರು.



ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸಿ. ಆರ್. ಮುಂಡರಗಿ ಮಾತನಾಡಿ ತಾಲೂಕುವಾರು ಗ್ರಾಮೀಣ ಉದ್ಯೋಗ ಖಾತ್ರಿ ಹಾಗೂ ವಿಬಿಜಿ ರಾಮ್‌ಜಿ ಕಾಮಗಾರಿಗಳ ಪ್ರಗತಿಯನ್ನು ವಿವರಿಸಿ, ಜಲಮೂಲಗಳ ಪುನಶ್ಚೇತನ ಹಾಗೂ ಕೆರೆ ಹೂಳೆತ್ತುವ ಕಾರ್ಯಗಳು ಪ್ರಗತಿಯಲ್ಲಿವೆ ಎಂದು ಮಾಹಿತಿ ನೀಡಿದರು.

ವಸತಿ ನಿವೇಶನ ಭೂ ಗುರುತಿಸುವಿಕೆ: ತಾಲೂಕು ಮಟ್ಟದಲ್ಲಿ ತಹಸೀಲ್ದಾರ್ ಹಾಗೂ ಇಒಗಳ ಸಮನ್ವಯದೊಂದಿಗೆ ಅರ್ಹ ಫಲಾನುಭವಿಗಳಿಗೆ ನಿವೇಶನ ಒದಗಿಸಲು ಭೂಮಿ ಗುರುತಿಸುವ ಹಾಗೂ ಸರ್ವೆ ಮಾಡುವ ಪ್ರಕ್ರಿಯೆ ಚುರುಕಿನಿಂದ ನಡೆಯುತ್ತಿದೆ ಎಂದು ಸಭೆಯಲ್ಲಿ ವಿವರಿಸಿದರು.

ಜಂಟಿ ಕೃಷಿ ನಿರ್ದೇಶಕಿ ಶ್ರೀಮತಿ ಚೇತನಾ ಪಾಟೀಲ್ ಮಾತನಾಡಿ ಜಿಲ್ಲೆಯಲ್ಲಿ ಜೋಳದ ಕೊಯ್ಲು ಕಾರ್ಯಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ರೈತರಿಗೆ ಸೂಕ್ತ ಮಾಹಿತಿ ಹಾಗೂ ಬೆಂಬಲ ನೀಡಲಾಗುತ್ತಿದೆ. ಸೆಪ್ಟೆಂಬರ್ ತಿಂಗಳಿನಲ್ಲಿ ವಾಡಿಕೆಗಿಂತ ಮಳೆ ಕಡಿಮೆಯಾಗಿದ್ದರೂ, ಅಕ್ಟೋಬರ್‌ನಲ್ಲಿ ಮಳೆಯ ಪ್ರಮಾಣ ಚೇತರಿಸಿಕೊಂಡು ಶೇಕಡಾ 90 ರಷ್ಟು ಪ್ರಗತಿ ಕಂಡಿದೆ ಎಂದರು. ಜಂಟಿ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಶೇಕಡಾ 99 ರಷ್ಟು ಸಾಧನೆಯಾಗಿದ್ದು, ಮಿಸ್‌ಮ್ಯಾಚ್ ಪ್ರಕರಣಗಳು ಹಾಗೂ ಬೆಳೆ ಹಾನಿ ಸಮೀಕ್ಷೆಯನ್ನು ನಿಗದಿತ ದಿನಾಂಕದೊಳಗೆ ಪೂರ್ಣಗೊಳಿಸಿ ಅರ್ಹ ರೈತರಿಗೆ ಪರಿಹಾರ ದೊರಕಿಸಲು ಕ್ರಮವಹಿಸಲಾಗುತ್ತಿದೆ. 'ಪಿಎಂ ಕಿಸಾನ್' ಯೋಜನೆಯಡಿ ಉಳಿದಿರುವ ಅರ್ಹ ರೈತರು ತಕ್ಷಣವೇ ಇ-ಕೆವೈಸಿ ಪೂರ್ಣಗೊಳಿಸುವಂತೆ ಮನವಿ ಮಾಡಿದರು. ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್, ಉಪ ವಿಭಾಗಾಧಿಕಾರಿ ಗಂಗಪ್ಪ ಎಮ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಎಲ್ಲಾ ತಾಲೂಕಿನ ತಹಸೀಲ್ದಾರರು, ಕಾರ್ಯನಿರ್ವಾಹಣಾ ಅಧಿಕಾರಿಗಳು, ಹಾಜರಿದ್ದರು.

# ಮಾರನಬಸರಿಯಲ್ಲಿ ಅ. 12ರಿಂದ ಏಳು ದಿನಗಳ ಎನ್‌ಎಸ್‌ಎಸ್ ಶಿಬಿರ

**ನರೇಗಲ್ಲ:** ನರೇಗಲ್ಲದ ಅನ್ನದಾನೇಶ್ವರ ಪದವಿಪೂರ್ವ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಸಮೀಪದ ಮಾರನಬಸರಿ ಗ್ರಾಮದಲ್ಲಿ ಅ.12ರಿಂದ 18ರವರೆಗೆ ಏಳು ದಿನಗಳ ಎನ್‌ಎಸ್‌ಎಸ್ ಶಿಬಿರ ಆಯೋಜಿಸಲಾಗಿದೆ.



ಶಿಬಿರದ ಉದ್ಘಾಟನಾ ಸಮಾರಂಭ ಅ.12ರಂದು ಸಂಜೆ 6 ಗಂ-ಟೆಗೆ ನಡೆಯಲಿದ್ದು, ಹಾಲಕೆರೆ ಸಂಸ್ಥಾನಮಠದ ಪರಮಪೂಜ್ಯ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಎಸ್.ಎ.ಪಿ.ಯು. ಕಾಲೇಜಿನ ಆಡಳಿತ ಮಂಡಳಿ ಚೇರ್ಮನ್ ರವೀಂದ್ರನಾಥ ದೊಡ್ಡಮೇಟಿಅಧ್ಯಕ್ಷತೆವಹಿಸಲಿದ್ದಾರೆ. ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಬೆಂಗಳೂರು ಉಪನಿರ್ದೇಶಕ ಸಿದ್ದಲಿಂಗ ಬಂಡು ಮಸನಾಯಕ, ಎಸ್.ಎ.ವಿ.ವಿ.ಪಿ. ಸಮಿತಿ ಆಡಳಿತಾಧಿಕಾರಿ ಡಾ. ಜಿ.ಕೆ. ಕಾಳೆ, ಕಾಲೇಜು ಆಡಳಿತ ಮಂಡಳಿ ಚೇರ್ಮನ್ ಮಹಾಂತೇಶ ಸೋಮನಕಟ್ಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶರಣಪ್ಪ ಬಿ. ನರೇಗಲ್ಲ, ಕಾಲೇಜಿನ ಪ್ರಾಚಾರ್ಯ ವೈ.ಸಿ. ಪಾಟೀಲ ಹಾಗೂ ಗದಗ ಎಸ್.ಎ. ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ವಿದ್ಯಾಸಾಗರ ಸೇರಿದಂತೆ ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಏಳು ದಿನಗಳ ಶಿಬಿರದಲ್ಲಿ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಸಾಮಾಜಿಕ ಜವಾಬ್ದಾರಿ ಹಾಗೂ ಶಿಸ್ತು ಬೆಳೆಸುವುದರ ಜತೆಗೆ ಗ್ರಾಮ ಸ್ವಚ್ಛತೆ, ಪರಿಸರ ಜಾಗೃತಿ, ಸಾಮಾಜಿಕ ಅರಿವು ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು. ಗ್ರಾಮೀಣ ಬದುಕಿನ ವಾಸ್ತವತೆ ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳೂ ನಡೆಯಲಿವೆ.

ಈ ಕುರಿತು ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎಂ.ಎಸ್. ಹೊನ್ನವಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಹಿತಿ ನೀಡದ, ವಿಚಾರಣೆಗೆ ಹಾಜರಾಗದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ದಂಡ

**ಕೊಪ್ಪಳ**: ಸಕಾಲಕ್ಕೆ ಮಾಹಿತಿ ನೀಡಲು ಹಾಗೂ ವಿಚಾರಣೆಗೆ ಹಾಜರಾಗದೆ ನಿರ್ಲಕ್ಷ್ಯ ವಹಿಸಿದ ವಿವಿಧ ಸಾರ್ವಜನಿಕ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ. ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠ ದಂಡ ವಿಧಿಸಿ ಆದೇಶ ಮಾಡಿದೆ.



ಮೇಲ್ಮನವಿದಾರರು ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದು, ಅವರಿಗೆ ಪ್ರತಿವಾದಿಗಳು ಸಕಾಲಕ್ಕೆ ಮಾಹಿತಿ ನೀಡದ ಕಾರಣ ಮೇಲ್ಮನವಿದಾರ ಕರ್ನಾಟಕ ಮಾಹಿತಿ ಆಯೋಗ ಕಲಬುರಗಿ ಪೀಠದ ಮುಂದೆ ಸಲ್ಲಿಸಿದ ದ್ವಿತೀಯ ಮೇಲ್ಮನವಿಯ ವಿಚಾರಣೆ ನಡೆಸಿದ ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ.ವೆಂಕಟ ಸಿಂಗ್ ಐವರು ಅಧಿಕಾರಿಗಳಿಗೆ ತಲಾ 10 ಸಾವಿರದಂತೆ ಒಟ್ಟು 50 ಸಾವಿರ ದಂಡ ವಿಧಿಸಿ ಆದೇಶ ಮಾಡಿದ್ದಾರೆ.

ರಾಯಚೂರು ತಾಲೂಕಿನ ಮೇಲ್ಮನವಿದಾರರಿಗೆ ಮಾಹಿತಿ ನೀಡಿ, ಅವರಿಗೆ ನೀಡಿದ ಮಾಹಿತಿ ಮತ್ತು ಸ್ವೀಕೃತಿ ಪತ್ರಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಆಯೋಗ ಮಾಡಿದ ಆದೇಶ ಪಾಲನೆ ಮಾಡದೆ ನಿರ್ಲಕ್ಷ್ಯ ಮಾಡಿದ ಕಾರಣ ಈ ಹಿಂದೆ ಬಸವಕಲ್ಯಾಣ ನಗರಸಭೆ ಪ್ರಥಮ ದರ್ಜೆ ಸಹಾಯಕರಾಗಿದ್ದ ಸೂರ್ಯಕಾಂತಗೆ ಬೋಳಮಾನದೊಡ್ಡಿ ಗ್ರಾಮ ಪಂಚಾಯತ ಕಾರ್ಯದರ್ಶಿ ಮಲ್ಲಿಕಾರ್ಜುನಗೆ 10 ಸಾವಿರ, ಕಲಬುರಗಿ ಪಾಲಿಕೆ ಪರಿಸರ ಅಭಿಯಂತ ಅಭಯಕುಮಾರಗೆ 10 ಸಾವಿರ, ಕುಷ್ಟಗಿ ತಾಲೂಕಿನ ಜುಮ್ಮಾಪೂರ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗುರಪ್ಪ ನಾಯಕಗೆ 10 ಸಾವಿರ ಹಾಗೂ ಹೊಸಪೇಟೆ ತಾಲೂಕಿನ ನಾಗಲಾಪುರ ಗ್ರಾಮ ಪಂಚಾಯತ್ ಕಾರ್ಯದರ್ಶಿ ರವಿಕುಮಾರಗೆ 10 ಸಾವಿರ ದಂಡ ವಿಧಿಸಿ ಆದೇಶ ಮಾಡಲಾಗಿದೆ.

ಪ್ರತಿವಾದಿ ಅಧಿಕಾರಿಗಳಿಗೆ ವಿಧಿಸಿದ ದಂಡ ಅವರ ಬರುವ ತಿಂಗಳ ವೇತನದಲ್ಲಿ ಕಡಿತಗೊಳಿಸಿ ಆಯೋಗ ಸೂಚಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ರಶೀದಿ ಆಯೋಗ-ಕ್ಕೆ ಸಲ್ಲಿಸಲು ಅನುಕ್ರಮವಾಗಿ ದಂಡನೆಗೊಳಪಟ್ಟ ಮೇಲಾಧಿಕಾರಿಗಳಿಗೆ ಆಯೋಗ ಆದೇಶ ಮಾಡಿದೆ. ಆಯೋಗದ ಆದೇಶದಂತೆ ದಂಡ ಪಾವತಿ ಮಾಡಬೇಕು ಹಾಗೂ ಆಯೋಗದ ಆದೇಶ ತಲುಪಿದ ತಕ್ಷಣವೇ ಮೇಲ್ಮನವಿದಾರರಿಗೆ ಮಾಹಿತಿ ನೀಡಿ ಅದರ ಪ್ರತಿ ಮತ್ತು ಸ್ವೀಕೃತಿ ಪತ್ರ ಆಯೋಗಕ್ಕೆ ಸಲ್ಲಿಸಿ ಮುಂದಿನ ವಿಚಾರಣೆಗೆ ಹಾಜರಾಗುವಂತೆ ಪ್ರತಿವಾದಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ 2005 ರ 18 (3) ರಡಿ ಆದೇಶಿಸಿ, ತಪ್ಪಿದಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005 ರ 20 (2) ರಡಿ ಎಚ್ಚರಿಕೆ ನೀಡಿದೆ. ಹಾಗೂ ಪ್ರತಿವಾದಿಗಳ ಪ್ರಥಮ ಮೇಲ್ಮನವಿ ಪ್ರಾಧಿಕಾರದ ಅಧಿಕಾರಿಗಳು ಈ ಕುರಿತು ಕ್ರಮ ವಹಿಸಲು ಸೂಚನೆ ನೀಡಿತಪ್ಪಿದಲ್ಲಿಶಿಸ್ತುಕ್ರಮಕ್ಕೆಶಿಫಾರಸ್ಸುಮಾಡುವುದಾಗಿ ಎಚ್ಚರಿಕೆ ನೀಡಿದೆ.

# ಕಳಸಾಪೂರ ಬಸವ ಕೇಂದ್ರದಲ್ಲಿ 1633ನೇ ಶಿವಾನುಭವ

**ಗದಗ:** ಗದಗ ತಾಲೂಕ ಕಳಸಾಪೂರ ಗ್ರಾಮದ ಬಸವ ಕೇಂದ್ರದಲ್ಲಿ 1633ನೇ ವಾರದ ಶಿವಾನುಭವ ಮೊದಲಿಗೆ ಸಾಮೂಹಿಕ ಪ್ರಾರ್ಥನೆ ಪ್ರಶಾಂತ ಬ. ಖಂಡಮ್ಮನವರ ಇವರಿಂದ ಜರುಗಿತು. ಎಲ್ಲ ಮಕ್ಕಳಿಂದ ವಚನಗೋಷ್ಠಿ ಹಾಗೂ ವಚನ ಅನುಭಾವ ಎಲ್ಲರಿಂದ ಜರುಗಿತು.

ಕಾರ್ಯಕ್ರಮದ ವೇದಿಕೆಯ ಮೇಲೆ ಗ್ರಾಮದ ರೈತ ಸಂಘದ ಅಧ್ಯಕ್ಷರಾದ ಮಂಜನಗೌಡ ರಾಮನಗೌಡರ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಮಲ್ಲಿಕಾರ್ಜುನ ಖಂಡಮ್ಮನವರ,ಶ್ರೀಮತಿಶಿಲ್ಪಾಖಂಡಮ್ಮನವರ,ಶ್ರೀಮತಿ ಜಯಶ್ರೀ ಖಂಡಮ್ಮನವರ, ಮದನ ಹಯಿಲಗೋಳ, ಶ್ರೀಮತಿ ರಾಧಾ ರ. ದುಂದೂರ ಉಪಸ್ಥಿತರಿದ್ದರು. ಕಾರ್ಯಕ್ರಮ ಉದ್ದೇಶಿಸಿ ಮಲ್ಲಿಕಾರ್ಜುನ ಗ. ಖಂಡಮ್ಮನವರ ಮಾತನಾಡುತ್ತ ಕಾಯಕವೆಂದರೆ ಸತ್ಯ ಶುದ್ಧ ಕಾಯಕ ವ ಮಾಡಿ ತಂದು ವಂಚನೆಯಿಲ್ಲದೆ ಪ್ರಪಂಚವಳಿದು, ವಿಚ್ಚ ಜಂಗಮಕ್ಕೆ ದಾಸೋಹವ ಮಾಡುವ ಸದ್ಭಕ್ತನ ಸಹೃದಯದೊಳಗೆ ಆಚ್ಚೊದಂತಿ-ದ್ದ ಕಾಯಧೂಮ ಧೂಳೇಶ್ವರ. ಕಾಯಕವೆಂದರೆ ದೇಹವನ್ನು ದುಡಿಸುವುದು ಎಂದರ್ಥವಲ್ಲ. ದೇಹವನ್ನು ದಣಿಸಿ ಮಾಡುವ ಕೃಷಿ, ನೇಯ್ಗೆ, ಕಮ್ಮಾರಿಕೆ, ಕುಂಬಾರಿಕೆ ಹೀಗೆ ಅನಂತ ಶ್ರಮಿಕ ವರ್ಗ ಮಾಡುವ ಕಾಯಕವಲ್ಲದೇ ಬುದ್ದಿಯನ್ನು ದುಡಿಸಿ ಜ್ಞಾನದ ಬಲದಿಂದ ಮಾಡುವ ಕೆಲಸಗಳೂಪವಿತ್ರಕಾರ್ಯಗಳೇ.ವೈದ್ಯವೃತ್ತಸಾಮಾಜಿಕ ರಂಗದಲ್ಲಿ ಯೋಜನೆ ರೂಪಿಸುವ ಅಭಿಯಂತರರ ಶಿಕ್ಷಕರು, ಸಾಹಿತಿಗಳು, ನ್ಯಾಯಾಧೀಶರು ಸರಕಾರಿ ಯಂತ್ರದಲ್ಲಿ ದುಡಿಯುವಂಥ ನೌಕರೆಲ್ಲರ ಪ್ರಾಮಾಣಿಕ ದುಡಿಮೆಯೂ ಕಾರ್ಯವೆನಿಸುವದು. ಇವು ಕಾಯಕದ ಎರಡು ಪ್ರಕಾರಗಳಾದರೆ ಮೂರನೆಯದು ತಮ್ಮಲ್ಲಿರುವ ಸಂಪತ್ತನ್ನು ತೊಡಗಿಸಿ ಮಾಡುವ ವ್ಯಾಪಾರ-ವ್ಯವಹಾರ ಉದ್ದಿಮೆಗಳು. ಹೀಗೆ ದೇಹ-ಬುದ್ದಿ-ಧನ ಯಾವುದನ್ನು ಬಳಸಿ ದುಡಿದರೂ ಸತ್ಯ ಶುದ್ಧವಾಗಿರಬೇಕೆ ಹೊರತು ದುರಾಶೆಯಿಂದ ಮೋಸದಿಂದ ಸಂಗ್ರಹಿಸಲು ಪ್ರಯತ್ನಿಸಬಾರದು. ಅದರಿಂದ ಸಮಾಜದಲ್ಲಿ ಅಸಮತೆಯುಂಟಾಗಿ ಜನ ಜೀವನ ಅಸ್ತವ್ಯಸ್ತವಾಗುತ್ತದೆ ಎಂದು ಕಳಸಾಪೂರ ಗ್ರಾಮದ ಬಸವ ಕೇಂದ್ರದ ಕಾರ್ಯಾಧ್ಯಕ್ಷರು, ಕನ್ನಡ ಅಭಿಮಾನಿ, ಸಮಾಜ ಸೇವಕ ಮಲ್ಲಿಕಾರ್ಜುನ ಗ. ಖಂಡಮ್ಮನವರ ಮಾತನಾಡಿದರು. ಸ್ವಾಗತ ನಿರೂಪಣೆ ಅಚ್ಚುಕಟ್ಟಾಗಿ ಶಿವಾನಂದ ವಾಲಿಕಾರ ನಡೆಸಿಕೊಟ್ಟರು.ಕೊನೆಗೆವಚನಮಂಗಲಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತೆಂದು ಪ್ರಶಾಂತ ರಣತೂರ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.



# ನವೆಂಬರ್‌ನಲ್ಲಿ ನಡೆಯುವುದೇ ಹಂಪಿ ಉತ್ಸವ?

## ಆಚರಣೆಗೆ ದಿನಾಂಕ ನಿಗದಿ ಪಡಿಸುವಂತೆ ಕಲಾವಿದರ ಒತ್ತಾಯ | ಹಂಪಿ ಉತ್ಸವದ ಕುರಿತು ಮೌನ

**ಹೊಸಪೇಟೆ:** ನಾಡ ಹಬ್ಬ ಮೈಸೂರು ದಸರಾ ಆಚರಣೆಗೆ ಹಂಪಿ ಪ್ರೇರಣೆಯಾಗಿದ್ದು, ಮೈಸೂರ ದಸರಾ ಆಚರಣೆಗೆ ಪ್ರತಿ ವರ್ಷ ರಾಜ್ಯ ಸರ್ಕಾರದಿಂದ ಸಿಕ್ಕ ಪ್ರೋತ್ಸಾಹ ಐತಿಹಾಸಿಕ ಹಂಪಿ ಉತ್ಸವ ಆಚರಣೆಗೆ ಸಿಗದಿರುವುದು ವಿಪರ್ಯಾಸದ ಸಂಗತಿ.

ಮೈಸೂರು ದಸರಾ ಆಚರಣೆ ಮಾದರಿಯಲ್ಲಿ ಹಂಪಿ ಉತ್ಸವ ಆಚರಣೆಗೂ ನಿರ್ದಿಷ್ಟ ದಿನಾಂಕ ನಿಗದಿ ಪಡಿಸಿ ಅದೇ ದಿನಾಂಕದಂದು ಹಂಪಿ ಉತ್ಸವ ಆಚರಣೆ ಮಾಡಬೇಕು ಎಂಬುದು ಈ ಭಾಗದ ಜನರ ಬೇಡಿಕೆಯಾಗಿದೆ. ಈ ವರ್ಷದಿಂದ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ತಪ್ಪದೇ ಆಚರಣೆ ಮಾಡಬೇಕು ಎಂದು ಕಲಾಭಿಮಾನಿಗಳ ಅಭಿಪ್ರಾಯವಾಗಿದೆ.

ಪ್ರತಿ ವರ್ಷ ನವೆಂಬರ್ 3, 4 ಮತ್ತು 5ರಂದು ಹಂಪಿ ಉತ್ಸವ ಆಚರಿಸಬೇಕು ಎನ್ನುವ ಒತ್ತಾಯವಾಗಿದ್ದರಿಂದ ಕಳೆದ ಬಾರಿ ಹಂಪಿ ಉತ್ಸವ ಉದ್ಘಾಟನೆಗೆ ಆಗಮಿಸಿದ್ದ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಂದಿನ ಬಾರಿಯೂ ಹಂಪಿ ಉತ್ಸವವನ್ನು ನವೆಂಬರ್ 3, 4 ಮತ್ತು 5 ರಂದು ಆಚರಣೆ ಮಾಡುವುದಾಗಿ ಘೋಷಣೆ ಮಾಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಬಸವಂತಪ್ಪ ಸಹ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರೊಂದಿಗೆ ಹಂಪಿ ಉತ್ಸವ ಆಚರಣೆ ಕುರಿತು ಚರ್ಚಿಸಿ ದಿನಾಂಕ ನಿಗದಿಪಡಿಸಿ ಹಂಪಿ ಉತ್ಸವ ಆಚರಣೆ ಮಾಡಲಾಗುವುದು ಎಂದು ಹೇಳಿದ್ದಾರೆ.

ನವೆಂಬರ್ ತಿಂಗಳು ಸಮೀಪಿಸುತ್ತಿದ್ದರೂ ಈವರೆಗೆ ವಿಜಯನಗರ ಜಿಲ್ಲೆಯಲ್ಲಿ ಹಂಪಿ ಉತ್ಸವದ ಮಾತುಗಳು ಕೇಳಿ ಬರುತ್ತಿಲ್ಲ.ಈ ಬಾರಿಯೂ ಬರಗಾಲ ಸೇರಿದಂತೆ ನಾನಾ ನೆಪವೊಡ್ಡಿ ಬೇರೆ ತಿಂಗಳಲ್ಲಿ ಹಂಪಿ ಉತ್ಸವ ಆಚರಣೆ ಮಾಡಬಹುದು ಎನ್ನುವ ಆತಂಕ ಸ್ಥಳೀಯ ಕಲಾವಿದರು, ಸಾರ್ವಜನಿಕರಲ್ಲಿ ಎದುರಾಗಿದೆ.

ವಿಜಯನಗರದ ಗತ ವೈಭವ ಮರುಕಳಿಸುವಂತೆ ಹಂಪಿಯಲ್ಲಿನ ಸ್ಮಾರಕಗಳ ಶೈಲಿಯಲ್ಲಿ ಹಂಪಿ ಉತ್ಸವದ ವೇದಿಕೆ ನಿರ್ಮಿಸುವ ಮೂಲಕ ವಿಶ್ವವಿಖ್ಯಾತ ಹಂಪಿ ಉತ್ಸವ ಆಚರಣೆಗೆ ರಾಜ್ಯ ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಡಳಿತ ಇದುವರೆಗೂ ಹಂಪಿ ಉತ್ಸವ ಕುರಿತು ಧ್ವನಿ ಎತ್ತದೇ ಮೌನವಾಗಿರುವುದು ನೋಡಿದರೆ

ಹಂಪಿ ಉತ್ಸವ ಆಚರಣೆ ನವಂಬರ್‌ನಲ್ಲಿ ನಡೆಯುವುದು ಅನುಮಾನ ಮೂಡಿಸುತ್ತಿದೆ. ಹಿಂದಿನಂತೆ ಜನವರಿ ಅಥವಾ ಫೆಬ್ರವರಿಯಲ್ಲಿ ಕಾಟಾಚಾರಕ್ಕೆ ಹಂಪಿ ಉತ್ಸವ ನಡೆಸುವ ಲಕ್ಷಣಗಳು ಗೋಚರಿಸುತ್ತಿವೆ.

ನವೆಂಬರ್‌ತಿಂಗಳಲ್ಲಿಹಂಪಿಉತ್ಸವನಡೆಯಬಹುದುಎಂದು ಈಗಾಗಲೇ ಕಲಾವಿದರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ತಮ್ಮ ಕಲಾಪ್ರಕಾರಗಳೊಂದಿಗೆ ನಿರಂತರ ರಂಗ ತಾಲೀಮಿನಲ್ಲಿ ಕಲಾವಿದರು ತೊಡಗಿದ್ದಾರೆ.

ಹಂಪಿ ಉತವ ಆಚರಣೆಗೆ ತಿಂಗಳ ಮೊದಲೇ ಹಂಪಿ ಸೇರಿದಂತೆ ಜಿಲ್ಲೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗುತ್ತಿತ್ತು. ಕಲಾವಿದರ ಆಯ್ಕೆ, ವೇದಿಕೆ ನಿರ್ಮಾಣಕ್ಕೆ ಸಿದ್ಧತೆ ಸೇರಿದಂತೆ ಉತ್ಸವಕ್ಕೆ ಸಂಬಂಧಿಸಿದ ವಿವಿಧ ಕಾರ್ಯಗಳು





ಹಂಪಿ ಉತ್ಸವ ಆಚರಣೆ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಆದೇಶ ಬಂದ ತಕ್ಷಣವೇ ಹಂಪಿ ಉತ್ಸವ ಬಗ್ಗೆ ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಳ್ಳಲಿದೆ.

| ಕವಿತಾ ಎಸ್.ಮನ್ನಿಕೇರಿ, ಜಿಲ್ಲಾಧಿಕಾರಿ ವಿಜಯನಗರ ಜಿಲ್ಲೆ

ರಾಜಕೀಯ ಮುತ್ಸದ್ದಿ ದಿ.ಎಂ.ಪಿ. ಪ್ರಕಾಶ್ ಅವರು ಇರುವಾಗ



ಹಂಪಿ ಉತ್ಸವಕ್ಕೆ ಸಾಕಷ್ಟು ಮಾನ್ಯತೆ ಸಿಗುತ್ತಿತ್ತು. ಎಂ.ಪಿ.ಪ್ರಕಾಶ್ ಹಂಪಿ ಉತ್ಸವ ವನ್ನು ನಾಡ ಸಾಂಸ್ಕೃತಿಕ ಕಾರ್ಯಕ್ರಮ ರೂಪಿಸುತ್ತಿದ್ದರು. ಎಂ.ಪಿ.ಪ್ರಕಾಶ್ ನಂತರ ಹಂಪಿ ಉತ್ಸವದ ಸ್ವರೂಪವೇ ಬದಲಾಗುತ್ತಿರುವುದು ಬೇಸರದ ಸಂಗತಿ. ವ ವನ್ನು ನಾಡ ಹಬ್ಬವನ್ನಾಗಿ

| ಮಾರೆಪ್ಪ ಮಾರೆಮ್ಮ ದಾಸರ, ಹಿರಿಯ ತತ್ವಪದ ಕಲಾವಿದ ಯಲಬುರ್ಗಾ

### ಹೋರಾಟ ಅನಿವಾರ್ಯ

ಹಂಪಿ ಉತ್ಸವ ಆಚರಣೆಗೆ ಸ್ಥಳೀಯ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಹೀಗಾಗಿ ಹಂಪಿ ಉತ್ಸವ ಆಚರಣೆಗಾಗಿ ಕಲಾವಿದರು, ಸಂಘ-ಸಂಸ್ಥೆಗಳು ಬೀದಿಗಿಳಿದು ಹೋರಾಟ ನಡೆಸಬೇಕಾದ ಅನಿವಾರ್ಯತೆ ಉಂಟಾಗಲಿದೆ ಎಂದು ಕಲಾವಿದರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

# ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಸೌಮ್ಯಗೆ ಅಭಿನಂದನೆ

**ಯಲಬುರ್ಗಾ:** ವಿದ್ಯಾರ್ಥಿಗಳು ಕಲಿಕೆ ಜತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಮರೆಯಾಗುತ್ತಿರುವ ಗ್ರಾಮೀಣ ಕ್ರೀಡೆಗಳನ್ನು ಉಳಿಸುವ ಜತೆಗೆ ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಿ ಎಂದು ಡಾ. ಅಂದಾನಯ್ಯ ಶಾಡ್ಲಿಗೇರಿ ಮಠ ಅವರು ಸಲಹೆ ನೀಡಿದರು.

ತಾಲೂಕಿನ ಮುಧೋಳ ಗ್ರಾಮದ ಶ್ರೀ ತ್ರಿಲಿಂಗೇಶ್ವರ ಪ್ರೌಢಶಾಲಾ ವಿದ್ಯವರ್ಧಕ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸೌಮ್ಯ ಕಳಕಪ್ಪ ಹುಂಬಿ 8ನೇ ತರಗತಿ ವಿದ್ಯಾರ್ಥಿನಿ ಇತ್ತೀಚಿಗೆ ಕೊಪ್ಪಳ ದಲ್ಲಿ ನಡೆದ ಪ್ರೌಢ ಶಾಲಾ ವಿಭಾಗದ ಜಿಲ್ಲಾ ಮಟ್ಟದ ಕ್ರೀಡಾಕೂಟದ 400 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ ಶ್ರೀ ತ್ರಿಲಿಂಗೇಶ್ವರ ವಿದ್ಯಾವರ್ಧಕ ಸಮಿತಿಯಿಂದ ಸೌಮ್ಯ ಅವರ ತಾಯಿಯವರಿಗೆ ಸನ್ಮಾನಿಸಿ ಗೌರವಿಸಿದರು. ಮತ್ತು ದೈಹಿಕ ಶಿಕ್ಷಕರಾದ ಸಂತೋಷ ಕಳ್ಳಿಮಠ ಅವರಿಗೂ ಸನ್ಮಾನಿಸಿದರು. ಸೌಮ್ಯ ಓದಿನೊಂದಿಗೆ ಕ್ರೀಡೆಯಲ್ಲೂ ಸಾಧನೆ ಮಾಡಿದ್ದು ನಿಜಕ್ಕೂ ಅವರ್ಣನೀಯ. ವಿದ್ಯಾರ್ಥಿಗಳು ಕಠಿಣ ಪರಿಶ್ರಮ, ನಿರಂತರ ಅಭ್ಯಾಸ ಹಾಗೂ ಗುರುಗಳ ಮಾರ್ಗದರ್ಶನ ಪಡೆದರೆ ಮಾತ್ರ ಇಂತಹ ಸಾಧನೆ ಮಾಡಲು ಸಾಧ್ಯ ಎಂದರು.

ಈ ವಿದ್ಯಾರ್ಥಿನಿಗೆ ಗ್ರಾಮ ಪಂಚಾಯಿತಿ ವತಿಯಿಂದ



ಕರಿಸಿದ್ದಪ್ಪ ತಮಿನಾಳ, ವಿಆರ್‌ಡಬ್ಲ್ಯೂ ವೀರಭದ್ರಪ್ಪ ನಿಡಗುಂದಿ, ಸಿಬ್ಬಂದಿಯವರು ಸಾಧನೆಗೈದ ಈ ವಿದ್ಯಾರ್ಥಿನಿಗೆ ರಾಜ್ಯಮಟ್ಟದಲ್ಲಿಯೂ ಜಯಶಾಲಿಯಾಗಿಲಿ ಎಂದು ಹಾರೈಸಿ ಸನ್ಮಾನಿಸಿದರು.

ಈಸಂದರ್ಭದಲ್ಲಿಶ್ರೀತ್ರಿಲಿಂಗೇಶ್ವರಪ್ರೌಢಶಾಲೆವಿದ್ಯಾವರ್ಧಕ ಸಮಿತಿಯ ಕಾರ್ಯದರ್ಶಿಗಳಾದ ಎಲ್ಲಪ್ಪ ಹುನಗುಂದ. ಸದಸ್ಯರುಗಳಾದ ಕಳಕಪ್ಪ ತಮಿನಾಳ. ಈರನಗೌಡ ಗೌಡರ್. ಕಳಕಪ್ಪ ಕುರಿ. ವಿಜಯ್ ಕುಮಾರ್ ಅಕ್ಕಿ. ಶರಣಪ್ಪ ಪೂರ್ತಗೇರಿ. ಕರಿಸಿದ್ದಪ್ಪ ದಗಲಿ. ಅಪ್ಪಣ್ಣ ಪಲ್ಯದ. ಈರಣ್ಣ ತಮಿನಾಳ. ನಿವೃತ್ತ ಶಿಕ್ಷಕರಾದ ಬಸಪ್ಪ ಹಗೆದಾಳ. ಚತ್ರೆಪ್ಪ ಛಲವಾದಿ. ಮತ್ತು ಮುಖ್ಯಶಿಕ್ಷಕರು, ಶಿಕ್ಷಕರು, ಸಿಬ್ಬಂದಿ ಮತ್ತು ಗ್ರಾಪಂ ಸಿಬ್ಬಂದಿ, ಹುಸೇನಸಾಬ ಹಿರೇಮನಿ. ಮೈಲಾರಪ್ಪ, ಗುರುಬಸವ ಸೇರಿದಂತೆ ಇತರರರು ಸನ್ಮಾನಿಸಿದರು.

ನಮ್ಮಗ್ರಾಮದಮಗಳುರಾಜ್ಯಮಟ್ಟಕ್ಕೆಆಯ್ಕೆಯಾಗಿರುವುದು ಇಡೀ ಗ್ರಾಮಕ್ಕೆ ಹೆಮ್ಮೆಯ ವಿಷಯ," ವಿದ್ಯಾರ್ಥಿನಿಗೆ ರಾಜ್ಯ ಮಟ್ಟದ ಸ್ಪರ್ಧೆಯಲ್ಲೂ ಪ್ರಥಮ ಸ್ಥಾನ ಪಡೆದು ರಾಷ್ಟ ಮಟ್ಟಕ್ಕೆ ಆಯ್ಕೆಯಾಗಲಿ ಎಂದು ತ್ರಿಲಿಂಗೇಶ್ವರ ಪ್ರೌಢಶಾಲೆ ವಿದ್ಯಾವರ್ಧಕ ಸಮಿತಿ ಅಧ್ಯಕ್ಷ ಚಂದ್ರಶೇಖರ್ ಹನುಮಂತರಾವ್ ದೇಸಾಯಿ ಶುಭ ಹಾರೈಸಿದರು.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning



# ಮೈಸೂರು ದಸರಾ ಪರಂಪರೆ, ಇತಿಹಾಸ ಮತ್ತು ಗತವೈಭವ

**ದಸರೆಯ ಮಹತ್ವ:** ಭಾರತೀಯ ಹಬ್ಬಗಳು ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯೊಂದಿಗೆ ಮಾನವೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಪ್ರಮುಖ ಮಾಧ್ಯಮಗಳಾಗಿವೆ. ಇಂದಿನ ಯುವ ಪೀಳಿಗೆಗೆ ಇದರ ಪರಿಚಯವನ್ನು ಮಾಡುವುದು ಅತೀ ಅಗತ್ಯ ಹಾಗೂ ಭಾರತೀಯರಿಗೆ ನಮ್ಮ ದೇಶದ ಸಾಂಸ್ಕೃತಿಕ ಶ್ರೀಮಂತಿಕೆ ಬಗ್ಗೆ ಹೆಮ್ಮೆಯನ್ನು ಹೊಂದುವಂತಹ ಒಂದು ಸುವರ್ಣಾವಕಾಶವಾಗಿದೆ.

"ದಸರಾ" ಭಾರತದ ಪ್ರಮುಖ ಪಾರಂಪರಿಕ ಹಬ್ಬಗಳಲ್ಲಿ ಒಂದಾಗಿದೆ. ನವರಾತ್ರಿ ಮತ್ತು ವಿಜಯದಶಮಿಯನ್ನು ಒಳಗೊಂಡ ಹತ್ತು ದಿನಗಳ ಈ ಉತ್ಸವವು ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಮಹತ್ವವನ್ನು ಹೊಂದಿದೆ. ಮಾತ್ರವಲ್ಲ, ಅಂತರಾಷ್ಟ್ರೀಯ ಮಟ್ಟದಲ್ಲಿ "ಮೈಸೂರು ದಸರಾ" ಆಚರಣೆಯ ವೈಶಿಷ್ಟವನ್ನು ಗಮನಿಸಿ, 2008ರಲ್ಲಿ ಯುನೆಸ್ಕೋ ದಸರಾ ಆಚರಣೆಯ ಕಲಾಪ್ರಕಾರಗಳನ್ನು 'ಮಾನವೀಯತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆ' ಎಂದು ಗುರುತಿಸಿದೆ.

ಶರದೃತುವಿನಲ್ಲಿ ಆಚರಿಸಲಾಗುವ ನವರಾತ್ರಿಯು ದೇವಿಯ ವಿವಿಧ ರೂಪಗಳ ಆರಾಧನೆಗೆ ಸಮರ್ಪಿತವಾಗಿದ್ದು, ವಿಜಯದಶಮಿಯನ್ನು ವಿಜಯದ ಸಂಕೇತವಾಗಿ ಆಚರಿಸಲಾಗುತ್ತದೆ. ದುಷ್ಟಶಕ್ತಿಯ ಮೇಲೆ ಸತ್ಕಾರ್ಯ ಮತ್ತು ಧರ್ಮದ ವಿಜಯವೇ ಇದರ ಪ್ರಮುಖ ಸಂದೇಶ. ದೇಶದ ವಿವಿಧ ಭಾಗಗಳಲ್ಲಿ ವಿಭಿನ್ನ ರೀತಿಯಲ್ಲಿ ದಸರಾ ಆಚರಿಸಲಾಗುತ್ತಿದ್ದರೂ, ಮೈಸೂರು ದಸರಾ ತನ್ನ ವಿಶಿಷ್ಟ ಪರಂಪರೆ, ರಾಜವೈಭವ ಮತ್ತು ಸಾಂಸ್ಕೃತಿಕ ಆಚರಣೆಗಳಿಂದ ವಿಶ್ವಪ್ರಸಿದ್ಧವಾಗಿದೆ.

**ನವರಾತ್ರಿ ಮತ್ತು ದೇವಿ ಆರಾಧನೆ:** ಪುರಾಣಗಳಲ್ಲಿ ಮಹಿಷಾಸುರನಂತಹ ಅಸುರ ಶಕ್ತಿಗಳ ವಿರುದ್ಧ ಚಾಮುಂಡೇಶ್ವರಿ ದೇವಿಯ ವಿಜಯದ ಕಥೆಗಳು ನವರಾತ್ರಿ ಆಚರಣೆಯೊಂದಿಗೆ ಸಂಬಂಧ ಹೊಂದಿವೆ. ಅಸುರರ ಸಂಹಾರದ ಮೂಲಕ ಧರ್ಮ ಮತ್ತು ಸತ್ಯದ ವಿಜಯವನ್ನು ಸಂಭ್ರಮಿಸಲಾಗುತ್ತದೆ. ಮೈಸೂರು ದಸರೆಯಲ್ಲಿ ಚಾಮುಂಡೇಶ್ವರಿ ದೇವಿಯ ಆರಾಧನೆಗೆ ವಿಶೇಷ ಸ್ಥಾನವಿದೆ.

ಪ್ರಕೃತಿಯನ್ನು ಮಾತೃಸ್ವರೂಪವಾಗಿ ಕಾಣುವ ಭಾರತೀಯ ಪರಂಪರೆಯಲ್ಲಿ ಶಕ್ತಿಯನ್ನು ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನೀ, ಕಾಲರಾತ್ರಿ, ಮಹಾಗೌರಿ ಮತ್ತು ಸಿದ್ಧಿಧಾತ್ರಿ ಎಂಬ ನವರೂಪಗಳಲ್ಲಿ ಆರಾಧಿಸಲಾಗುತ್ತದೆ.

ಘಟಸ್ಥಾಪನೆ, ದೇವಿ ಪೂಜೆ, ಸರಸ್ವತಿ ಪೂಜೆ, ದುರ್ಗಾಷ್ಟಮಿ, ಆಯುಧ ಪೂಜೆ ಹಾಗೂ ಇತರ ಧಾರ್ಮಿಕ ವಿಧಿವಿಧಾನಗಳು ಈ ಅವಧಿಯಲ್ಲಿ ನಡೆಯುತ್ತವೆ. ಹತ್ತನೆಯ ದಿನವಾದ ವಿಜಯದಶಮಿಯು ವಿಜಯಲಕ್ಷ್ಮೀ ಅಥವಾ ಅಪರಾಜಿತಾ ದೇವಿಯ ಆರಾಧನೆಯನ್ನು ನಡೆಸಲಾಗುತ್ತದೆ. ನವರಾತ್ರಿಯ ಒಂಭತ್ತು ದಿನಗಳು ದೇವಿಯ ಒಂಭತ್ತು ವಿವಿಧ ಬಣ್ಣಗಳನ್ನು ಸಂಕೇತಿಸುತ್ತವೆ. ದಿನ–1 ಕಿತ್ತಳೆ, ದಿನ–2 ಬಿಳಿ, ದಿನ–3 ಕೆಂಪು, ದಿನ–4 ಕಡುನೀಲಿ, ದಿನ–5 ಹಳದಿ, ದಿನ–6 ಹಸಿರು, ದಿನ–7 ಬೂದು, ದಿನ–8 ನೇರಳೆ, ದಿನ–9 ನವಿಲು ಹಸಿರು ಬಣ್ಣಗಳಿಂದ ದೇವಿಯನ್ನು ಅಲಂಕರಿಸಲಾಗುತ್ತದೆ. ಅಲ್ಲದೇ, ಹೆಣ್ಣುಮಕ್ಕಳೂ ಸಹ ನವರಾತ್ರಿಯ ಪ್ರತಿದಿನವೂ ಅದೇ ಬಣ್ಣದ ಉಡುಪುಗಳನ್ನು ಧರಿಸಿ ಸಂಭ್ರಮಿಸುತ್ತಾರೆ.

ವಿಜಯದಶಮಿಗೆ ರಾಮಾಯಣದ ಹಿನ್ನೆಲೆಯೂ ಇದೆ. ಶ್ರೀರಾಮನು ರಾವಣನನ್ನು ಸಂಹರಿಸಿದ ದಿನವೆಂದು ಇದನ್ನು ಆಚರಿಸುವ ಸಂಪ್ರದಾಯವಿದೆ. ಹೀಗಾಗಿ ದಸರಾ ದೇವಿಯ ವಿಜಯ ಮತ್ತು ಶ್ರೀರಾಮನ ವಿಜಯ ಎರಡನ್ನೂ ಪ್ರತಿನಿಧಿಸುವ ಮಹತ್ವದ ಹಬ್ಬವಾಗಿದೆ.

**ಐತಿಹಾಸಿಕ ಹಿನ್ನೆಲೆ:** ಮೈಸೂರು ದಸರೆಯ ಇತಿಹಾಸ ಅತ್ಯಂತ ಪ್ರಾಚೀನವಾಗಿದೆ. ಭಾರತದ ವಿವಿಧ ರಾಜವಂಶಗಳ ಕಾಲದಲ್ಲಿಯೇ ದುರ್ಗಾ ಮತ್ತು ಮಹಿಷಮರ್ದಿನಿಯ ಆರಾಧನೆಯ ಶಿಲ್ಪಗಳು ಕಂಡುಬರುವುದರಿಂದ ದಸರಾ ಆಚರಣೆಯು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿರುವುದಾಗಿ ಪರಿಗಣಿಸಲಾಗಿದೆ. ಶ್ರೀರಂಗಪಟ್ಟಣದ ಪತನದ ನಂತರ ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 1799ರಲ್ಲಿ ಮೈಸೂರಿನಲ್ಲಿ ದಸರಾ ಉತ್ಸವಕ್ಕೆ ಮರುಚಾಲನೆ ನೀಡಿದರು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ದಸರಾ ಉತ್ಸವವು ಅತ್ಯಂತ ವೈಭವದಿಂದ ನಡೆಯುತ್ತಿತ್ತು. ಇಂದಿನ ಮೈಸೂರು ದಸರಾ ವಿಜಯನಗರದ ಈ ಪರಂಪರೆಯ ಮುಂದುವರಿದ ರೂಪವಾಗಿದೆ.

**ಮೈಸೂರು ಒಡೆಯರ ಕಾಲದ ದಸರಾ ವೈಭವ:** ಮೈಸೂರು ಅರಸರಾದ ಶ್ರೀ ರಾಜ ಒಡೆಯರ್ ಅವರು ಶಾ.ಶ. 1610ರಲ್ಲಿ ಶ್ರೀರಂಗಪಟ್ಟಣದಲ್ಲಿ ಹತ್ತು ದಿನಗಳ ದಸರಾ ಉತ್ಸವವನ್ನು ಆರಂಭಿಸಿದರು. ನಂತರ ಮೈಸೂರು ಒಡೆಯರ ಆಡಳಿತದಲ್ಲಿ ದಸರಾ ಉತ್ಸವವು ರಾಜವೈಭವದ ಪ್ರಮುಖ ಸಂಕೇತವಾಗಿ ಬೆಳೆಯಿತು. 1648ರಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರ್ ಅವರ ಕಾಲದ ದಸರಾ ಆಚರಣೆಗಳ ವಿವರಗಳನ್ನು ಕವಿ ಗೋವಿಂದವೈದ್ಯರು ತಮ್ಮ 'ಕಂಠೀರವ ನರಸರಾಜ ವಿಜಯ' ಕೃತಿಯಲ್ಲಿ ದಾಖಲಿಸಿದ್ದಾರೆ. ಆ ಕಾಲದಲ್ಲಿ ದೇವಿ ಆರಾಧನೆ, ಆಯುಧ ಪೂಜೆ, ರಾಜದರ್ಬಾರ್, ಮಲ್ಲಯುದ್ಧ, ನೃತ್ಯ, ಸಂಗೀತ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ದಸರೆಯ ಪ್ರಮುಖ ಭಾಗವಾಗಿದ್ದವು.

ಮೈಸೂರು ಒಡೆಯರ ಕಾಲದಲ್ಲಿ ದಸರಾ ರಾಜಮನೆತನದ ಪ್ರಮುಖ ಉತ್ಸವವಾಗಿತ್ತು. ನವರಾತ್ರಿಯ ಸಂದರ್ಭದಲ್ಲಿ ರಾಜರು ಕುಲದೇವತೆ ಹಾಗೂ ಇತರ ದೇವತೆಗಳನ್ನು ಪೂಜಿಸಿ, ಪಟ್ಟದ ಆನೆ ಮತ್ತು ಕುದುರೆಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ರಾಜದರ್ಬಾರ್, ಆಯುಧ ಪೂಜೆ ಮತ್ತು ವಿಜಯದಶಮಿ ಮೆರವಣಿಗೆಗಳು ಪ್ರಮುಖ ಕಾರ್ಯಕ್ರಮಗಳಾಗಿದ್ದವು.

ಚತುರಂಗಬಲ ಆಯುಧಪೂಜೆಗೆ (32 ಆಯುಧಗಳಪೂಜೆ) ಅಣಿಗೊಂಡ ಆಯುಧಗಳು

ಮಹಾನವಮಿಯಂದು ಪಟ್ಟದ ಕತ್ತಿ ಸೇರಿದಂತೆ ರಾಜವಂಶದ ಆಯುಧಗಳನ್ನು ವಿಶೇಷವಾಗಿ ಪೂಜಿಸಲಾಗುತ್ತದೆ. ಹಿಂದಿನ ಕಾಲದಲ್ಲಿ ರಾಜದರ್ಬಾರ್, ಮಲ್ಲಯುದ್ಧ, ಸಂಗೀತ, ನೃತ್ಯ, ಬಾಣಬಿರುಸು ಮತ್ತು ವಿವಿಧ ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳು ದಸರೆಯ ಭಾಗವಾಗಿದ್ದವು. ಕಾಲ ಬದಲಾದಂತೆ ಅವುಗಳಲ್ಲಿ ಹಲವು ರೂಪಾಂತರಗೊಂಡಿದ್ದರೂ, ದಸರೆಯ ಮೂಲ ಪರಂಪರೆ ಇಂದಿಗೂ ಮುಂದುವರಿದಿದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ್:** ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಸರಾ ಆಚರಣೆ ವಿಶೇಷ ವೈಭವವನ್ನು ಪಡೆದಿತ್ತು. ಮಹಾನವಮಿಯಂದು ಕತ್ತಿ, ಖಡ್ಗ ಸೇರಿದಂತೆ ರಾಜವಂಶದ ವಿವಿಧ ಆಯುಧಗಳಿಗೆ ಪೂಜೆ ಸಲ್ಲಿಸಲಾಗುತ್ತಿತ್ತು. ವಿಜಯದಶಮಿಯಂದು ರಾಜರು ರಾಜಪೋಷಾಕಿನಲ್ಲಿ ಖಡ್ಗ ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರು. ಆ ಕಾಲದಲ್ಲಿ ಇಂದಿನಂತೆ ಚಿನ್ನದ ಅಂಬಾರಿಯಲ್ಲಿ ರಾಜರು ಸಂಚರಿಸುತ್ತಿರಲಿಲ್ಲ. ಆನೆಗಳು ಎಳೆಯುವ ಬೆಳ್ಳಿಯ ರಥದಲ್ಲಿ ಮಹಾರಾಜರು ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿದ್ದರು. ನಂತರ ಕುದುರೆಯೇರಿ ಸೈನ್ಯ ವೀಕ್ಷಿಸಿ, ಬನ್ನಿಮರಕ್ಕೆ ಪೂಜೆ ಸಲ್ಲಿಸುವ ಸಂಪ್ರದಾಯವೂ ಇತ್ತು.

**ಚಾಮುಂಡಿ ಬೆಟ್ಟದ ವಿಶೇಷತೆ:** ಮೈಸೂರು ದಸರೆಯ ಧಾರ್ಮಿಕ ಹಿನ್ನೆಲೆಯ ಪ್ರಮುಖ ಕೇಂದ್ರ ಚಾಮುಂಡಿ ಬೆಟ್ಟ. ನವರಾತ್ರಿಯ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಿಗೆ ಪ್ರತಿದಿನ ವಿಶೇಷ ಅಲಂಕಾರ ಮತ್ತು ಪೂಜೆಗಳನ್ನು ನೆರವೇರಿಸಲಾಗುತ್ತದೆ.

ದೇವಿಯನ್ನು ವಿವಿಧ ಶಕ್ತಿರೂಪಗಳಲ್ಲಿ ಅಲಂಕರಿಸುವ ಸಂಪ್ರದಾಯವಿದೆ. ನವರಾತ್ರಿಯ ಹತ್ತು ದಿನಗಳ ಅವಧಿಯಲ್ಲಿ ದೇವಿಯ ವಿವಿಧ ಅಲಂಕಾರಗಳು ಭಕ್ತರನ್ನು ಆಕರ್ಷಿಸುತ್ತವೆ. ವಿಜಯದಶಮಿಯಂದು ದೇವಿಯನ್ನು ಅಪರಾಜಿತೆಯ ರೂಪದಲ್ಲಿ ಆರಾಧಿಸಲಾಗುತ್ತದೆ.

ನವರಾತ್ರಿಯ ಮತ್ತೊಂದು ವಿಶೇಷ ಆಚರಣೆ ಕುಮಾರಿ ಪೂಜೆ. 2–10 ವಯಸ್ಸಿನ ಬಾಲಕಿಯರನ್ನು ದೇವಿಯ ವಿವಿಧ ರೂಪಗಳ ಪ್ರತೀಕವಾಗಿ ಪೂಜಿಸುವ ಸಂಪ್ರದಾಯವೂ ಕೆಲವು ಕಡೆಗಳಲ್ಲಿ ಕಂಡುಬರುತ್ತದೆ.

**ಅರಮನೆಯ ಪ್ರಮುಖ ಆಕರ್ಷಣೆ ಸಿಂಹಾಸನ:** ಮೈಸೂರು ಸಂಸ್ಥಾನದಲ್ಲಿ ಮತ್ತೊಂದು ಪ್ರಮುಖ ಆಕರ್ಷಣೆ ಸಿಂಹಾಸನವಾಗಿದೆ. ಇದು ರತ್ನ ಖಚಿತ ಚಿನ್ನದ ಸಿಂಹಾಸನವಾಗಿದ್ದು ಇದಕ್ಕೆ ಅದರದೆ ಆದ ಇತಿಹಾಸವಿದೆ ದಸರಾ ಸಂದರ್ಭಗಳಲ್ಲಿ ಮಾತ್ರ ವೀಕ್ಷಣೆಗೆ ಸಾರ್ವಜನಿಕರಿಗೆ ಲಭ್ಯವಿದ್ದು, ಈ ಚಿನ್ನದ ಸಿಂಹಾಸನವು ದಸರಾ ಮುಂಚೆ ಒಂದು ಶುಭಮುಹೂರ್ತದಲ್ಲಿ ಖಾಸಗಿ ದರ್ಬಾರ್ ಹಾಲಿನಲ್ಲಿ ಜೋಡಣೆ ಮಾಡಲಾಗುತ್ತದೆ ಸುಮಾರು 30 ರಿಂದ 40 ದಿನಗಳ ಕಾಲ ವೀಕ್ಷಣೆ ಮಾಡಬಹುದಾಗಿದೆ. ಈ ಚಿನ್ನದ ಸಿಂಹಾಸನದಲ್ಲಿ ಹಲವು ವೈಶಿಷ್ಟಗಳು ಕೂಡಿದ್ದು, ಈ ಚಿನ್ನದ ಸಿಂಹಾಸನ ಬೆಳ್ಳಿಯ ಮೆಟ್ಟಿಲು ಹೊಂದಿದ್ದು ಎರಡು ಬದಿಯಲ್ಲಿ ದರ್ಪಣಾ ಸುಂದರಿಯರು ಇದ್ದು, ಮಹಾರಾಜರಿಗೆ ಸ್ವಾಗತ ಮಾಡುವ ಭಂಗಿಯಲ್ಲಿ ನಿಂತಿರುವ ಹಾಗೆ ರೂಪಿಸಲಾಗಿದೆ.

ಇನ್ನು ಈ ಚಿನ್ನದ ಸಿಂಹಾಸನದ ಮೇಲ್ಭಾಗದಲ್ಲಿ ಚಿನ್ನದ ಛಾಮರ ಹೊಂದಿದ್ದು, ಅದಕ್ಕೆ ಮಯೂರ ಪಕ್ಷಿಯನ್ನು ಜೋಡಿಸಲಾಗಿದೆ. ಸುತ್ತಲೂ ಮುತ್ತುಗಳಿಂದ ಅಲಂಕೃತವಾಗಿದೆ. ಇನ್ನು ಸಿಂಹಾಸನದ ಹಿಂಭಾಗದ ಮೇಲ್ಭಾಗದಲ್ಲಿ ಲಕ್ಷ್ಮೀ, ಚಾಮುಂಡೇಶ್ವರಿ ಮತ್ತು ಸರಸ್ವತಿಯ ಮೂರ್ತಿ ಇದ್ದು, ತಳಭಾಗದಲ್ಲಿ ವಿಜಯದಶಮಿಯ ದಿನ ಸಿಂಹಾಸನಕ್ಕೆ ರಾಜವಂಶಸ್ಥರಿಂದ ಹೋಮ ಹವನ ನಡೆಸಿ ಸಿಂಹವನ್ನು ಜೋಡಿಸುತ್ತಾರೆ.

ಮೈಸೂರು ಅರಸರ ಬೆಡಗಿನ ರತ್ನಖಚಿತ ಸ್ವರ್ಣ ಸಿಂಹಾಸನ "ಸ್ವರ್ಣಕಲಾ ನಿಪುಣ" ಸಿಂಗಣ್ಣಾಚಾರ್ಯ ಈ ಸಿಂಹಾಸನವನ್ನು ಚಿನ್ನಾಭರಣಗಳು, ಬೆಲೆಬಾಳುವ ರತ್ನಗಳು ಮತ್ತು ಬೆಳ್ಳಿಯ ಪ್ರತಿಮೆಗಳಿಂದ ಶೃಂಗರಿಸಿದ್ದಾರೆ. ಕಾಲಕ್ರಮೇಣ ಇದಕ್ಕೆ ಚಿನ್ನದ ಹಾಳೆಗಳು, ನವರತ್ನಗಳು ಮತ್ತು ಕಲಾತ್ಮಕ ಅಲಂಕಾರಗಳನ್ನು ಅಳವಡಿಸಿ ಭವ್ಯರೂಪ ನೀಡಲಾಗಿದೆ.

**ವಿದ್ಯುತ್ ದೀಪಾಲಂಕಾರ:** ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (CESC) ವತಿಯಿಂದ ಮೈಸೂರು ನಗರದಲ್ಲಿ ಸುಮಾರು 130 ರಿಂದ 136 ಕಿಲೋಮೀಟರ್ ಉದ್ದದ ರಸ್ತೆಗಳಿಗೆ ವೈವಿಧ್ಯಮಯ

## ಅರಮನೆ ದಸರಾ ಮತ್ತು ನಾಡಹಬ್ಬ ದಸರಾ

**1969ರ ನಂತರ ಮೈಸೂರು ರಾಜಮನೆತನದ ಆಡಳಿತ ಅಂತ್ಯಗೊಂಡ ಹಿನ್ನೆಲೆಯಲ್ಲಿ ದಸರಾ ಆಚರಣೆಯಲ್ಲಿ ಮಹತ್ವದ ಬದಲಾವಣೆ ಉಂಟಾಯಿತು. ಪ್ರಸ್ತುತ ಮೈಸೂರಿನಲ್ಲಿ ದಸರಾ ಎರಡು ಪ್ರಮುಖ ರೂಪಗಳಲ್ಲಿ ನಡೆಯುತ್ತದೆ. ಒಂದೆಡೆ ಅರಮನೆಯೊಳಗೆ ರಾಜಮನೆತನದ ಪರಂಪರೆಯನ್ನು ಮುಂದುವರಿಸಿಕೊಂಡು ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಚರಣೆಗಳು ನಡೆಯುತ್ತವೆ. ಖಾಸಗಿ ದರ್ಬಾರ್, ಸರಸ್ವತಿ ಪೂಜೆ, ಆಯುಧ ಪೂಜೆ, ವಿಜಯದಶಮಿ, ಶಮೀಪೂಜೆ ಹಾಗೂ ಇತರ ಸಾಂಪ್ರದಾಯಿಕ ವಿಧಿವಿಧಾನಗಳು ಇದರ ಭಾಗವಾಗಿವೆ. ಮತ್ತೊಂದೆಡೆ ಕರ್ನಾಟಕ ಸರ್ಕಾರವು ಸಾರ್ವಜನಿಕರಿಗಾಗಿ 'ನಾಡಹಬ್ಬ ದಸರಾ'ವನ್ನು ಆಯೋಜಿಸುತ್ತದೆ. ಜಂಬೂ ಸವಾರಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ವಿವಿಧ ಸಾರ್ವಜನಿಕ ಕಾರ್ಯಕ್ರಮಗಳು ಇದರ ಪ್ರಮುಖ ಆಕರ್ಷಣೆಗಳಾಗಿವೆ. ಹೀಗಾಗಿ ಇಂದಿನ ಮೈಸೂರು ದಸರಾ ರಾಜಮನೆತನದ ಪರಂಪರೆ ಮತ್ತು ಆಧುನಿಕ ಸಾರ್ವಜನಿಕ ಉತ್ಸವದ ಸಮನ್ವಯವಾಗಿ ರೂಪುಗೊಂಡಿದೆ.**



ಹಾಗೂ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತದೆ. ಇಡೀ ಮೈಸೂರು ನಗರವನ್ನು – ಕಂಗೊಳಿಸುವಂತೆ ಮಾಡುವ ಈ ದೀಪಾಲಂಕಾರವು ನಗರದ ಸುಮಾರು 118 ಪ್ರಮುಖ ವೃತ್ತಗಳು ಮತ್ತು ಜಂಕ್ಷನ್ ಗಳನ್ನು ಒಳಗೊಂಡಿರುತ್ತದೆ. ಇದರೊಂದಿಗೆ ಕರ್ನಾಟಕದ ಸಂಸ್ಕೃತಿ ಮತ್ತು ಸಾಧಕರನ್ನು ಬಿಂಬಿಸುವ 75ಕ್ಕೂ ಹೆಚ್ಚು ಕಲಾಕೃತಿಗಳನ್ನು ಎಲ್ಇಡಿ ದೀಪಗಳ ಮೂಲಕ ಪ್ರದರ್ಶಿಸಲಾಗುತ್ತದೆ. ದೇಶ ಹಾಗೂ ವಿದೇಶಗಳಿಂದ ಬರುವ ಪ್ರವಾಸಿಗರ ವೀಕ್ಷಣೆಗಾಗಿ ಈ ಅದ್ಭುತ ಬೆಳಕಿನ ಹಬ್ಬವನ್ನು ಒಟ್ಟು 21 ದಿನಗಳ ಕಾಲ ಮುಂದುವರಿಸಲಾಗುತ್ತದೆ.

**ಚಾಮುಂಡೇಶ್ವರಿ ಉತ್ಸವ ಮತ್ತು ಜಂಬೂ ಸವಾರಿ:** ಮೈಸೂರು ದಸರಾ ಮತ್ತು ಆನೆಗಳ ನಡುವಿನ ಸಂಬಂಧವು ಬಹಳ ಹಳೆಯದು. ಒಡೆಯರ ಕಾಲದ ರಾಜವೈಭವದ ಮೆರವಣಿಗೆಗಳಿಂದ ಆರಂಭವಾದ ಈ ಪರಂಪರೆ, ಇಂದು ಸರ್ಕಾರದ ನೇತೃತ್ವದಲ್ಲಿ ನಡೆಯುವ ಜಂಬೂ ಸವಾರಿಯ ರೂಪದಲ್ಲಿ ಮುಂದುವರಿದಿದೆ. ಜಂಬೂಸವಾರಿ ಆರಂಭಕ್ಕೆ ಮುನ್ನ ಶುಭ ಕುಂಭ ಲಗ್ನದಲ್ಲಿ ಅರಮನೆಯ ಬಲರಾಮ ದ್ವಾರದಲ್ಲಿ ನಂದಿಧ್ವಜಕ್ಕೆ ಮೊದಲು ಪೂಜೆ ಸಲ್ಲಿಸಲಾಗುತ್ತದೆ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿ ಆಸೀನಳಾಗಿರುವ ತಾಯಿ ಚಾಮುಂಡೇಶ್ವರಿ ದೇವಿ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸಲಾಗುತ್ತದೆ. ಆ ಬಳಿಕ 24 ಕುಶಾಲತೋಪುಗಳ ಗೌರವವನ್ನು ಸಮರ್ಪಣೆ ಮಾಡಲಾಗುತ್ತದೆ. ಅಲ್ಲಿಂದ ಅರಮನೆ ಆವರಣದಲ್ಲಿ ವಿಜಯದಶಮಿಯ ಅತ್ಯಾಕರ್ಷಕ ಮೆರವಣಿಗೆಗೆ ಚಾಲನೆ ದೊರೆಯುತ್ತದೆ. ಜಂಬೂಸವಾರಿಯು ಅರಮನೆ ಆವರಣದಿಂದ ಬನ್ನಿಮಂಟಪದವರೆಗೆ ನಡೆಯುತ್ತದೆ. ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ದೇವಿ ಚಾಮುಂಡೇಶ್ವರಿಯನ್ನು ಹೊತ್ತು 14 ಅಲಂಕೃತ ಗಜಗಳೊಂದಿಗೆ, ಜನಸಾಗರದೊಡನೆ ಧೀರ–ಗಂಭೀರ ನಡಿಗೆಯಲ್ಲಿ ಮೆರವಣಿಗೆಯಲ್ಲಿ ಸಾಗುವ ಗಜರಾಜನ ಠೀವಿಗೆ ಸರಿಸಾಟಿಯಿಲ್ಲ. ಭಾರತದ ಬೇರೆಲ್ಲೂ ದಸರಾ ಸಮಯದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಆನೆಗಳು ಪಾಲ್ಗೊಳ್ಳುವುದಿಲ್ಲ.

ಅಂಬಾರಿ ಹೊತ್ತ ಬಲರಾಮನ ಜತೆಗೆ ಪೊಲೀಸ್ ಬ್ಯಾಂಡ್ ನ ಆಕರ್ಷಕ ತಾಳವಾದ್ಯ ಕಳೆಗಟ್ಟುತ್ತದೆ. ಅಲ್ಲದೆ, ಕಂಸಾಳೆ ಕುಣಿತ, ಕಲಾತಂಡಗಳ ನೃತ್ಯ ಪ್ರದರ್ಶನಗಳ ಜತೆಗೆ ರಾಜ್ಯದ ವಿವಿಧ ಜಿಲ್ಲೆಗಳ ಸಂಸ್ಕೃತಿ ಸಾರುವ ಸ್ತಬ್ಧಚಿತ್ರಗಳು ಎಲ್ಲರ ಗಮನ ಸೆಳೆಯುತ್ತದೆ. ಇದರ ವೀಕ್ಷಣೆಗೆ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರುತ್ತಾರೆ.

ದಸರೆಯ ವಿಶೇಷ ಕಾರ್ಯಕ್ರಮಗಳು: ಯುವಸಂಭ್ರಮ, ಯುವದಸರಾ: ದಸರಾಗೆ ಯುವ ಜನರನ್ನು ಸೆಳೆಯಲು ಯುವ ಸಂಭ್ರಮ ಮತ್ತು ಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವ ಬಯಲು ರಂಗಮಂದಿರದಲ್ಲಿ ಯುವಸಂಭ್ರಮ ಸಮಾರಂಭ ನಡೆಯುತ್ತದೆ. ಇದರಲ್ಲಿ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುತ್ತದೆ. ಜನಪದ ಸೇರಿದಂತೆ ವಿವಿಧ ಪ್ರಾಕಾರಗಳ ನೃತ್ಯಕಲಾವಿದರ ಪ್ರದರ್ಶನ ಗಮನ ಸೆಳೆಯುತ್ತದೆ. ವಿವಿಧ ಜಿಲ್ಲೆಗಳ ಶಾಲಾ–ಕಾಲೇಜು ವಿದ್ಯಾರ್ಥಿಗಳು ಈ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಇನ್ನು ಯುವದಸರಾದಲ್ಲಿ ಸಿನಿಮಾತಾರೆಯರು ಹಾಗೂ ಖ್ಯಾತಗಾಯಕರ ಸಮಾಗಮವಾಗುತ್ತದೆ. ಮಹಾರಾಜ ಮೈದಾನದಲ್ಲಿ ಸಮಾರಂಭ ನಡೆಯುತ್ತದೆ. ತಮ್ಮ ನೆಚ್ಚಿನ ನಟ–ನಟಿಯರು, ಗಾಯಕರನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಯುವದಸರಾದಲ್ಲಿ ಜನ ಸೇರುತ್ತಾರೆ.

**ಕಂಬಳ:**ಮೈಸೂರು ದಸರಾದಲ್ಲಿ ಇದೇ ಮೊದಲ ಬಾರಿಗೆ ಕರಾವಳಿಯ ಕೃಷಿ ಸಂಸ್ಕೃತಿ ಹಾಗೂ ಜನಪದದ ಪ್ರತೀಕವಾದ 'ಕಂಬಳ' ಆಯೋಜನೆ ಮಾಡಲಾಗುತ್ತಿದೆ. ಅಕ್ಟೋಬರ್ 18 ಮತ್ತು 19 ರಂದು ಮೈಸೂರಿನ ಸಾತಗಳ್ಳಿಯಲ್ಲಿ ಆಯೋಜಿಸಲು ಅಧಿಕೃತವಾಗಿ ಸಿದ್ಧತೆಗಳು ನಡೆದಿವೆ. ದಷ್ಟಪುಷ್ಟವಾಗಿ ಬೆಳೆಸಿದ ಕೋಣಗಳನ್ನು ಹಸನಾಗಿ ಹದಮಾಡಿದ ಮಣ್ಣಿನ ಗದ್ದೆಯಲ್ಲಿ ಓಡಿಸುವ ಸ್ಪರ್ಧೆಯೇ ಕಂಬಳ. ಈ ಕ್ರೀಡೆ ದಕ್ಷಿಣಕನ್ನಡ ಮತ್ತು ಉಡುಪಿಜಿಲ್ಲೆಯ ಜನಪದದೊಂದಿಗೆ ಹಾಸು ಹೊಕ್ಕಾಗಿದೆ. ಸಾಂಸ್ಕೃತಿಕ ಹಿನ್ನೆಲೆಯ ಕ್ರೀಡೆಯನ್ನು ದಸರಾದಲ್ಲಿ ಆಯೋಜಿಸಲಾಗುತ್ತಿದೆ.

**ಮೇಳಗಳು:** ಕೃಷಿ, ಆಹಾರ ಮೇಳಗಳನ್ನು ದಸರಾದಲ್ಲಿ ನಡೆಸಲಾಗುತ್ತದೆ. ರಾಜ್ಯದ ನಾನಾಭಾಗಗಳ ಸ್ಥಳೀಯ ಹಾಗೂ ವಿಶೇಷ ತಿನಿಸುಗಳು ಮಳಿಗೆಗಳಲ್ಲಿ ಸಿಗುತ್ತವೆ. ಆಹಾರ ಪ್ರಿಯರಿಗೆ ಈ ಮೇಳ ಖುಷಿ ಕೊಡುತ್ತದೆ. ಇಲ್ಲಿ ಸ್ಪರ್ಧೆಗಳನ್ನು ಸಹ ಆಯೋಜನೆ ಮಾಡಲಾಗುತ್ತದೆ. ತಿನ್ನುವ ಮತ್ತು ಅಡುಗೆ ಸ್ಪರ್ಧೆಗಳು ನಡೆಯುತ್ತವೆ. ವಿಜೇತರಿಗೆ ವಿಶೇಷ ಬಹುಮಾಗಳು ಸಹ ಇರುತ್ತವೆ. ಕೃಷಿ ಮೇಳವು ರೈತರಿಗೆ ಸಹಕಾರಿಯಾಗಲಿದೆ. ನಾನಾ ತಳಿಯ ಬೆಳೆಗಳು ಮತ್ತು ಹಣ್ಣುಗಳ ಪ್ರದರ್ಶನ, ಮಾರಾಟಕ್ಕೆ ಅವಕಾಶ ಇರುತ್ತದೆ. ರೈತರಿಗೆ ಕೃಷಿಸಂಬಂಧಿತ ಸಲಹೆಗಳಿಗಾಗಿ ವಿಚಾರಣಾ ಸಂಕಿರಣಗಳನ್ನು ಸಹ ಆಯೋಜನೆ ಮಾಡಲಾಗುತ್ತದೆ.

**ಪಂಜಿನ ಕವಾಯತು:** ವಿಜಯದಶಮಿಯಂದು ಜಂಬೂಸವಾರಿ ಮೆರವಣಿಗೆ ಬಳಿಕ ಸಂಜೆ ಮೈಸೂರಿನ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಅತ್ಯಂತ ಆಕರ್ಷಕ ಮತ್ತು ರೋಮಾಂಚಕ ಅಂತಿಮ ಕಾರ್ಯಕ್ರಮ ಪಂಜಿನ ಕವಾಯತು. ಇದು ಪೊಲೀಸ್ ಪಡೆಗಳ ಕವಾಯತು, ಸಾಹಸ ಪ್ರದರ್ಶನ ಹಾಗೂ ಬಣ್ಣಬಣ್ಣದ ಪಟಪಟಿಸುವ ಪಂಜುಗಳ ಬೆಳಕಿನ ಸಂಭ್ರಮದೊಂದಿಗೆ ಕಣ್ಮನ ಸೆಳೆಯುತ್ತದೆ. ಅತ್ಯಾಕರ್ಷಕ ಅಶ್ವಾರೋಹಿ ದಳದ ಸಾಹಸಗಳು, ಮೈ ಜುಮ್ಮೆನಿಸುವ ಮೋಟಾ ರ್ ಸೈಕಲ್ ಸಾಹಸ ಪ್ರದರ್ಶನಗಳು (ಡೇರ್ ಡೆವಿಲ್ ಸ್ಟಂಟ್ಸ್), ಪೊಲೀಸ್ ಬ್ಯಾಂಡ್ ವಾದನ ಮತ್ತು ಪಂಜುಗಳೊಂದಿಗೆ ಸಾಮೂಹಿಕ ಕವಾಯತು ನಡೆಯುತ್ತದೆ. ರಾತ್ರಿಯ ವೇಳೆ ಆಕಾಶದಲ್ಲಿ ಮೂಡುವ ವರ್ಣರಂಜಿತ ಸುಂದರ ಸಿಡಿಮದ್ದು ಪ್ರದರ್ಶನ ಹಾಗೂ ಲೇಸರ್/ ಡ್ರೋನ್ ಶೋ ಕೂಡ ಗಮನ ಸೆಳೆಯುತ್ತದೆ. ದಸರಾಗೆ ಅಂತಿಮ ಸ್ಪರ್ಶ ನೀಡುವ ಕಾರ್ಯಕ್ರಮ ಇದಾಗಿದೆ. ರಾಜರ ಕಾಲದಿಂದಲೂ ನಡೆದು–ಕೊಂಡು ಬಂದಿರುವ ಈ ಪರಂಪರೆಯು ದಸರಾ ಉತ್ಸವದ ಸಮಾಪ್ತಿಯನ್ನು ಸಾರುತ್ತದೆ.



**ಡಾ. ಶಾಲಿನಿ ರಜನೀಶ್**
**ಸರ್ಕಾರದ ಮುಖ್ಯ ಕಾರ್ಯದರ್ಶಿ**
**ಬೆಂಗಳೂರು**

ಅರಮನೆಯೊಳಗಿನ ಸಾಂಪ್ರದಾಯಿಕ ಆಚರಣೆಗಳು ಮೈಸೂರು ಒಡೆಯರ ಇತಿಹಾಸವನ್ನು ನೆನಪಿಸಿದರೆ, ಸಾರ್ವಜನಿಕ ದಸರಾ ಕಾರ್ಯಕ್ರಮಗಳು ಆ ಪರಂಪರೆಯನ್ನು ಜನಸಾಮಾನ್ಯರೊಂದಿಗೆ ಸಂಪರ್ಕಿಸುತ್ತವೆ.

**ಸಮಾರೋಪ:** ಮೈಸೂರು ದಸರಾ ಹಲವು ಶತಮಾನಗಳ ಇತಿಹಾಸ, ಧಾರ್ಮಿಕ ನಂಬಿಕೆ, ರಾಜಪರಂಪರೆ, ಕಲೆ, ಸಂಸ್ಕೃತಿ ಮತ್ತು ಜನಪಾಲ್ಗೊಳ್ಳುವಿಕೆಯ ಅಪೂರ್ವ ಸಂಗಮವಾಗಿದೆ. ವಿಜಯನಗರದ ಪರಂಪರೆಯಿಂದ ಮೈಸೂರು ಒಡೆಯರ ರಾಜವೈಭವದವರೆಗೆ ಮತ್ತು ಅಲ್ಲಿಂದ ಇಂದಿನ ನಾಡಹಬ್ಬದ ರೂಪದವರೆಗೆ ದಸರಾ ಹಲವು ಹಂತಗಳನ್ನು ದಾಟಿ ಬೆಳೆದಿದೆ.

ಬನ್ನಿ, ಈ ವರ್ಷದ ನಾಡಹಬ್ಬ ದಸರಾದಲ್ಲಿ ಎಲ್ಲರೂ ಪಾಲ್ಗೊಂಡು, ವೈವಿಧ್ಯಮ ಆಚರಣೆಗಳನ್ನು ಕಣ್ತುಂಬಿಕೊಳ್ಳೋಣ!

UTTARA KARNATAKA SUDDIGALU KANNADA DAILY MORNING OWNER, PUBLISHER, BY: AVINASH S SALIMANI, PUBLISHED FROM: 220 SHIVANAND NAGAR, NAVANAGAR, HUBLI_DHARWAD KARNATAKA- 580025, PRINTED AT: SHIVANI PRINTERS, NEW COURT OPPOSITE PLOT NO 28RS NO 312/ 3B GARAG COMPLEX GADAG, AT: GADAG- 582101, AT: KARNATAKA, EDITOR BY : AVINASH S SALIMANI